have been called fancifully as 'loan', instead of being appropriated in the name of 'grant.' The Government know fully well that these loans are irrecoverable; there is no chance of their recovery. To give an illustration, there are two rice mills in Bharatanhalli with a capacity of 3,500 tons per year, whereas the output of paddy in that area is not more than 2,000 tons. Still licenses are issued for granting rice mills. Government have also granted Rs. 45,000 loan to them. What was the guarantee or security for recovering the loan? Some authority who is in the pockets of some king-maker has granted these loans, these generous loans. Public funds should not be wasted like this. There must be some clean conscience while granting loans. Another rice mill has been started by a co-operative society with a capacity of five-thousand tons per year as I believe my information is accurate, at the same Bharatnahalli but the maximum use to which it can be put is not more than 36 thousand tons. There are six mills in the locality and all the six mills have not got sufficient work load for the entire year. At best they can be put to work for hardly three or four months. Knowing fully well this local situation, somebody has colluded with some king-makers and granted loans. It is rather unbecoming on the part of the Government or a particular individual or particular Minister to do such things without clean conscience. Please see the other side of the picture: for outstanding loans from agriculturists in Bidar, Gulbarga and Raichur Districts, lands are being sold and occupancy rights are also being auctioned. Number of representations were made to the officers including the Deputy Commissioners and the Divisional Commissioners. They pleaded their inability to do anything in the matter. When it is the case of poor people and peasants, the policy of Government is different. In the name of funds and strict discipline, arrears outstanding against them are collected mercilessly without any conscience and human approach. Surcharge is being collected. Arrears outstanding from the last 6 to 8 years are being collected from the poor agriculturists. But the same strictness is not invoked when collecting lumpsum loans amounting to Rs. 50,000 outstanding against single individuals and those who mint money; two different yardsticks you apply one of harassment when you deal with poor agriculturists and another one of appeasement when you are dealing with big excise contractors and defaulting P.W.D. contractors, as your class collaboration shows that you have no guts or courage to deal with them as they are your financiers during elections, and thanks to their black money you are in power to-day—you are more worried to prove your loyalty to them rather to book them and their black money and to these kings, money is advanced generously. That means, that things are done in furtherance of class or Party interest and not in the interests of the State.

Coming to the aspect of taxation, I want to say that sales-tax has increased day by day. There is no revision from the last ten years. There is abnormal rise in sales-tax, whereas there is no rise in other

(SRI V. N. PATIL)

direct taxations. Time has come to revise and remove inequitable Taxation. I would like to read an extract from "A picture of the Mysore Budget", 1967–68, issued by the Research Section of the Finance Department. It reads as follows :

> "Among the State taxes, the one which is contributing most to the revenues and the outturn from which is rising continuously, is the Sales Tax. The Sales Tax accounted for a revenue of Rs. 4.97 crores or 28 per cent of the State tax revenue in 1957-58 and Rs. 8.13 crores or 33 per cent of the State tax revenue in 1960-61. It rose from Rs. 9.45 crores accounting for 35 per cent of the State Tax revenue in 1961–62 to Rs. 19·54 crores accounting for 42 per cent of the State Tax revenue in 1965–66 during the Third Plan period. The revenue from Sales tax is anticipated to move up to Rs. 26 crores and Rs. 29 crores accounting for 48 and 47 per cent of the State Tax revenue in 1966-67 and 1967-68 respectively. In terms of per capita, the revenue from sales tax was Rs. 2.24 in 1957-58 and Rs. 3.47 in 1960-61. It rose from Rs. 3.97 in 1961-62 to Rs. 7.66 in 1965-66 in the course of the Third Plan period. Its incidence per capita is anticipated at Rs. 10.03 in 1966-67 and at Rs. 11.05 in 1967-68."

This sales-tax is being collected from the commonman. It comes out of the common man's purse. There are several other direct taxes also. With borders of Madras, Kerala and Andhra surrounding our State, the ordinary businessman, the small businessman is made to pay double and Multiple taxes and lot of harassment is caused to him. He has to undergo unprecedented harassment. This being so, the unscientific levy in the sales-tax indicate that there is unprecedented harassment to the common man in Mysore State who have come from five different parts of erstwhile states. We should not make them undergo such harassments. With this, I say that the concerned Minister has not applied his mind to this aspect properly and failed to discharge the onerous obligation cast upon him and has proved himself more subserving and protector of the interests of the monopolists betraying the interests of the common man.

†ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಸಭಾಪತಿಗಳೇ, ಇದಕ್ಕೆ ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಈ ಸಭೆಯ ಒಪ್ಪಿಗೆಗಾಗಿ ಇಷ್ಟೊಂದು ಬೇಡಿಕೆಗಳನ್ನು ಮಂಡಿಸಿದ್ದಾರೆ. ಡಿಮ್ಯಾಂಡ್ ನಂಬರ್ ಒಂದರಿಂದ 54ರ ವರೆಗೂ ಸಹ ಇರತಕ್ಕ ಈ ಬೇಡಿಕೆಗಳನ್ನು ನಾನು ವಿರೋಧಿಸಿ ಮಾತನಾಡುತ್ತೇನೆ. ಮೊಟ್ಟಮೊದಲನೆಯದಾಗಿ ಮೂರನೆಯ ಬೇಡಿಕೆಯ ಬಗ್ಗೆ ವಿಷಯ ಪ್ರಸ್ತಾಪಿಸ ಬಚ್ಛಿಸುತ್ತೇನೆ. ಸ್ಟೇಟ್ ಎಕ್ಸೈಜ್ ಡ್ಯೂಟೀಸ್ ಬಗ್ಗೆ ಈ ಸರ್ಕಾರದವರು ತಮ್ಮ ನಿಲುವು ಏನನ್ನು ತೆಗೆದುಕೊಂಡಿದ್ದಾರೆ ಎಂಬುದನ್ನು ನೋಡಿದ್ದೇ ಆದರೆ ಪಾನನಿರೋಧ ನಮ್ಮ ರಾಜ್ಯದಲ್ಲಿ ಇರಬೇಕೇ ಅಥವಾ ಬೇಡವೇ ಎಂಬ ಪ್ರಶ್ನೆ ರಾಜ್ಯದ ಪ್ರತಿಯೊಬ್ಬ ಪ್ರಜೆಯ ತಲೆಯಲ್ಲೂ ಕಾಡುತ್ತಾ ಇದೆ. ಕಾಂಗ್ರೆಸ್‌ನವರು ಸ್ವಾತಂತ್ರ್ಯ ಬಂದಮೇಲೆ ಪಾನನಿರೋಧವನ್ನು ಜಾರಿಗೆ ತರಬೇಕು ಅದನ್ನು ಬಹಳ ಪರಿಣಾಮಕಾರಿಯಾಗಿ ಆಚರಣೆಗೆ ತರಬೇಕೆಂದು ಯೋಚನೆ ಮಾಡಿದರೂ ಕೂಡ ಅವರಲ್ಲಿರತಕ್ಕ ಆಡಳಿತ ವರ್ಗ ಸರಿಯಾಗಿ ಕೆಲಸ ಮಾಡದೆಯೇ ಅಥವಾ ಅವರು ಈ ತತ್ವವನ್ನು ಒಪ್ಪಿಕೊಂಡ

†Indicates that the remarks or speeches have not been revised by the member concerned.

ರೀತಿಯಿಂದರೋ ಅಂತೂ ಅದು ಅರ್ಥವಾಗುವುದಿಲ್ಲ, ಈ ಪಾನನಿರೋಧವನ್ನು ರಾಜ್ಯದಲ್ಲಿ ಸರಿಯಾಗಿ ಆಚರಣೆಗೆ ತರದೇ ಇರುವುದರಿಂದ ಇವತ್ತು ಜನರ ಮನಸ್ಸು ಪಾನನಿರೋಧ ಇರಬೇಕೇ ಅಥವಾ ಬೇಡವೇ ಎನ್ನುವುದರ ಮೇಲೆ ಕೇಂದ್ರೀಕೃತವಾಗಿದೆ. ನನ್ನ ಅಭಿಪ್ರಾಯದಲ್ಲಿ ಈ ಪಾನನಿರೋಧ ಅನ್ನುವುದು ನಮ್ಮ ಸರ್ಕಾರದಲ್ಲಿ ಇರಕೂಡದು.

Due to failure of electricity, the House adjourned at Forty-one Minutes past Four of the Clock and re-assembled at Forty-five Minutes past Four of the Clock.

[MR. SPEAKER in the Chair]

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ನಾನು ಪಾನನಿರೋಧಕ್ಕೆ ಸಂಬಂಧಪಟ್ಟ ಕಾನೂನು ಇರಬೇಕೇ ಅಥವಾ ಬೇಡವೇ ಎಂಬ ವಿಷಯ ಮಾತನಾಡುತ್ತಾ ಇದ್ದೆ. ಈಗ ಸರ್ಕಾರದಲ್ಲಿ ಆಚರಣೆಯಲ್ಲಿರುವ ಈ ಪಾನನಿರೋಧ ರದ್ದಾಗಬೇಕೆಂದು ಹೇಳುವವರಲ್ಲಿ ನಾನೊಬ್ಬ. ಇದಕ್ಕೆ ಕಾರಣ ಇಷ್ಟೆ, ನಮ್ಮ ರಾಜ್ಯದಲ್ಲಿ ಈ ಪಾನನಿರೋಧ ನೀತಿಯಿಂದ ಸರ್ಕಾರಕ್ಕೆ ಬರತಕ್ಕ ನಷ್ಟ ತಪ್ಪುತ್ತದೆ, ಆ ನಷ್ಟವನ್ನು ತುಂಬಿಕೊಡುವುದಕ್ಕೆ ಈ ಪಾನನಿರೋಧ ನೀತಿ ರದ್ದಾಗಬೇಕೆಂದು ಹೇಳುವ ಕಾರಣದ ಜೊತೆಗೆ ಇವತ್ತು ಅದರಿಂದಾಗತಕ್ಕ ಒಳ್ಳೆಯದೇನು ಅಥವಾ ಸಮಾಜಕ್ಕೆ ಆಗತಕ್ಕ ಅನಿಷ್ಟ ಏನು, ಪ್ರತಿಫಲ ಏನು ಎಂಬುದನ್ನು ಯೋಚನೆ ಮಾಡಿ ನೋಡಿದಾಗ ನನಗೆ ಪ್ರಮುಖವಾಗಿ ಎರಡು ವಿಷಯಗಳು ಗಮನಕ್ಕೆ ಬರುತ್ತಾ ಇವೆ. ಮೊಟ್ಟಮೊದಲನೆಯದು, ಈಗಾಗಲೇ ಈ ಸದನದ ಕೆಲವು ಮಾನ್ಯ ಸದಸ್ಯರು ತಿಳಿಸಿದ್ದಾರೆ, ಯಾವ ವ್ಯಕ್ತಿ ಇಂತಹ ಕಳ್ಳಬಟ್ಟಿ ಸಾರಾಯಿ ವಗೈರೆ ಕುಡಿಯುತ್ತಾರೆ ಅಂತಹವರ ಆರೋಗ್ಯ ಬಹಳ ಹಾಳಾಗಿ ಕೆಟ್ಟುಹೋಗುತ್ತದೆ ಎನ್ನುವ ವಿಷಯ ಮತ್ತು ಅಷ್ಟೇ ಅಲ್ಲದೆ ಈ ಕಾನೂನನ್ನು ಸರ್ಕಾರದವರು ಮುಂದುವರಿಸುವುದರಿಂದ ಈ ಕಾನೂನನ್ನು ಬಿಗಿಯಾಗಿ ಅಥವಾ ಯಾವ ವ್ಯಕ್ತಿ ಇವತ್ತು ಸಮೃದ್ಧಿಯಾಗಿ ಕಳ್ಳಭಟ್ಟಿ ತಯಾರು ಮಾಡುತ್ತಾ ಇದ್ದಾರೆ ಅಂತಹವರು ಅದನ್ನು ತಯಾರು ಮಾಡಬಾರದು ಎಂದು ಹೇಳುತ್ತಾರೆ. ಅದರ ಮೇಲ್‌ವಿಚಾರಣೆ ನೋಡಿಕೊಳ್ಳುವುದಕ್ಕೆ ಸರ್ಕಾರ ಪೋಲೀಸ್ ಸಿಬ್ಬಂದಿಯನ್ನು ಇಟ್ಟಿದೆ. ಆ ಸಿಬ್ಬಂದಿ ವರ್ಗವೇ ಈ ಕಾನೂನನ್ನು ಮುರಿದು ಹಾಕಿದೆ. ಈ ಪೋಲೀಸ್ ಸಿಬ್ಬಂದಿ ವರ್ಗ ಯಾವ ಪ್ರಕಾರ ಚೊಕ್ಕವಾಗಿ ಕೆಲಸ ಮಾಡಬೇಕಾಗಿತ್ತೊ, ನಮ್ಮ ರಾಜ್ಯದಲ್ಲಿ ಈ ಕಾನೂನನ್ನು ಪ್ರಬಲವಾಗಿ ಆಚರಣೆಗೆ ತರಬೇಕಾಗಿತ್ತೊ ಅದೇ ಪೋಲೀಸ್ ಸಿಬ್ಬಂದಿವರ್ಗದ ಸಹಾಯದಿಂದ ಇಂತಹ ಕಳ್ಳಭಟ್ಟಿ ಕೇಂದ್ರಗಳು ಅತಿಯಾಗಿ, ಕಳ್ಳಭಟ್ಟಿ ತಯಾರಿಕೆ ಜಾಸ್ತಿಯಾಗಿ ಸಮಾಜ ಘಾತುಕತನ ತುಂಬಿ ತುಳುಕಾಡುತ್ತಾಇದೆ. ಸರ್ಕಾರದ ವಿಫಲವಾದ ನೀತಿಯಿಂದ ಈ ಪೋಲೀಸ್ ಡಿಪಾರ್ಟ್‌ಮೆಂಟು ಪೂರ್ತಿಯಾಗಿ ಕೆಟ್ಟು ಹಾಳಾಗಿ ಹೋಗಿದೆ, ಪ್ರತಿಯೊಬ್ಬ ವ್ಯಕ್ತಿಯೂ ಸಹ ಲಂಚಕೋರ ಎಂದು ಅನ್ನಿಸಿಕೊಳ್ಳುವ ಮಟ್ಟಕ್ಕೆ ಬಂದಿದೆ. ಒಂದು ಮಾತಿನಲ್ಲಿ ಹೇಳುವುದಾದರೆ, ನಮ್ಮ ರಾಜ್ಯದಲ್ಲಿ ಹೆಚ್ಚು ಆದಾಯ ಬರದೇ ಇರತಕ್ಕ ಈ ಕಾನೂನನ್ನು ಕೂಡಲೇ ರದ್ದುಮಾಡಬೇಕೆಂದು ಪ್ರಬಲವಾಗಿ ಹೇಳುತ್ತಾ ಇದ್ದೇನೆ.

ಈ ಸಂದರ್ಭದಲ್ಲಿ ಇನ್ನೊಂದು ವಿಷಯವೇನೆಂದರೆ ಪ್ರೀವಿ ಪರ್ಸ್ ಅಂಡ್ ಅಲೋಯನ್ಸ್‌ಸ್ ಟು ಇಂಡಿಯನ್ ರೂಲರ್ಸ್. ಈ 36ನೇ ಡಿಮ್ಯಾಂಡ್ ವಿಷಯದಲ್ಲಿ ಹೇಳುವುದಾದರೆ ಸ್ವಾತಂತ್ರ್ಯಬಂದ ಮೇಲೆ ಪ್ರಜಾ ತಂತ್ರವನ್ನು ಆಚರಣೆಗೆ ತರುತ್ತೇವೆ ಎಂದು ಯಾವ ಕಾಂಗ್ರೆಸ್‌ನವರು ನಮ್ಮ ದೇಶಕ್ಕೆ ಆಶ್ವಾಸನವನ್ನು ಕೊಟ್ಟಿದ್ದರೋ ಅದೇ ಜನ ಇವತ್ತು ರಾಜ್ಯಾಂಗದಲ್ಲೂ ಸಹ ಪ್ರಜಾತಂತ್ರ ಆಚರಣೆಗೆ ಬಂದಮೇಲೆ ಸಾಮಾನ್ಯ ಪ್ರಜೆಗೆ ಇವತ್ತು ಹಕ್ಕು ಎಷ್ಟಿದೆಯೋ ಅಥವಾ ತಪ್ಪುಮಾಡಿದಾಗ ಕೋರ್ಟಿನಲ್ಲಿ ಅವನಿಗೆ ಹೇಗೆ ಪ್ರಾಸಿಕ್ಯೂಟ್ ಮಾಡುತ್ತೇವೆಯೋ ಅದೇ ರೀತಿ ಅಷ್ಟೇ ಹಕ್ಕುಗಳನ್ನು ಹಿಂದಿನಿಂದ ಇರತಕ್ಕ ರಾಜರುಗಳಿಗೂ ಕೊಡಬೇಕಾಗುತ್ತದೆ, ಅಷ್ಟೇ ಅಲ್ಲ, ಈಗಿರತಕ್ಕ ಸರ್ಕಾರದ ನೀತಿ ವಿಶೇಷ ಹಕ್ಕುಗಳನ್ನು ಅವರಿಗೆ ಕೊಡದೆ, ಇತರರಂತೆಯೇ ಅವರ ಹಕ್ಕನ್ನು ಕಾಪಾಡಿಕೊಂಡು ಬರುವುದಕ್ಕೆ ಕೋರ್ಟಿಗೆ ಅಷ್ಟೇ ಹಕ್ಕು ಇರುತ್ತದೆ ಎಂದು ಹೇಳಿ ರಾಜಧನವನ್ನು ಕೊಡಬೇಕೆಂದು ರಾಜ್ಯಾಂಗದಲ್ಲೂ ಕೂಡ ತಂದು ಇವತ್ತು ನಮ್ಮ ಸಭೆ ಅದನ್ನು ಒಪ್ಪಿಕೊಂಡು ಅದರಂತೆ ನಡೆಸಬೇಕೆಂದು ರಾಜ ಮಹಾರಾಜರುಗಳಿಗೆ ಹಣ ಕೊಡಬೇಕಾಗಿದೆ ಎಂದು ಕೇಳುತ್ತಾ ಇದ್ದಾರೆ.

(ಶ್ರೀ ಎಸ್. ಬಂಗಾರಪ್ಪ)

ಇವತ್ತು ಯಾವ ಸಾಮಾನ್ಯ ವ್ಯಕ್ತಿ ತನ್ನ ಹಕ್ಕುಗಳಿಗಾಗಿ ಪ್ರಬಲವಾದ ಹೋರಾಟ ಮಾಡಿ ಹೊಟ್ಟೆಗೆ ತೊಂದರೆ ಪಡುತ್ತಾ ಇದ್ದಾನೆಯೋ ಅಂತಹ ಸಮಾಜದಲ್ಲಿ, ಲಕ್ಷೋಪಲಕ್ಷ ಜನ ತೊಂದರೆ ಪಡುತ್ತಾ ಇರತಕ್ಕದ್ದು ಕಣ್ಣಿಗೆ ಕಾಣುತ್ತಾ ಇದ್ದು, ಇವತ್ತು ನಮ್ಮ ಕಣ್ಣೆದುರಿಗೆ ಇರತಕ್ಕ ಸಾಮಾನ್ಯ ಮನುಷ್ಯನಿಗೆ ಅರೆಹೊಟ್ಟೆ ಹಾಕಿ ಇವತ್ತು ಅವನಿಂದ ಹಣವನ್ನು ವಸೂಲು ಮಾಡಿ ಅದನ್ನೆಲ್ಲಾ ರಾಜ ಮಹಾರಾಜ ಬೊಕ್ಕಸಕ್ಕೆ ತುಂಬತಕ್ಕ ನೀತಿಯನ್ನು ಖಂಡಿಸಬೇಕಾದ್ದು ನಮ್ಮ ಪ್ರಥಮ ಕರ್ತವ್ಯ ವಾಗಿದೆ, ಇದಕ್ಕೆ ಒಪ್ಪಿಗೆ ಕೊಡಬಾರದು ಎಂದು ಹೇಳುತ್ತೇನೆ.

ಇನ್ನೊಂದು ಬಹಳ ಮುಖ್ಯವಾದ ವಿಷಯ ಅಂದರೆ: ನಮ್ಮ ರಾಜ್ಯದಲ್ಲಿ ಈ ದಿವಸ ಬಹಳ ಜನ ನೌಕರರುದಾರರಿದ್ದಾರೆ. ಈ ನೌಕರರು ಸರ್ವೀಸಿನಿಂದ ರಿಟೈರ್ ಆಗುವುದಕ್ಕೆ ಇನ್ನು ಒಂದು ವರ್ಷ ಅವಧಿ ಇದೆ ಎನ್ನುವಾಗಲೇ ಅವರ ಪೆನ್‌ಷನ್ ಪೇಪರುಗಳನ್ನು ಸಿದ್ಧಪಡಿಸಿ ಅಕೌಂಟೆಂಟ್ ಜನರಲ್ ರವರ ಆಫೀಸಿಗೆ ಕಳುಹಿಸಬೇಕೆಂಬ ಕಾನೂನು ಸಹಾ ಇದೆ ಎಂಬುದಾಗಿ ನಾನು ಕೇಳುತ್ತಿದ್ದೇನೆ. ನಾವು ಈ ದಿವಸ ಪೇಪರುಗಳನ್ನು ನೋಡುತ್ತಿರುವಂತೆ ಮತ್ತು ನನಗೆ ಸ್ವತಃ ಗೊತ್ತಿರುವಂತೆ ನೂರಾರು ಕೇಸುಗಳಿವೆ, ಪೆನ್‌ಷನ್ ಪೇಪರುಗಳ ಬಗ್ಗೆ ಸರ್ಕಾರದವರು ಅಂದರೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ನಿಗಾ ತೆಗೆದುಕೊಳ್ಳದೆ ಇರುವ ಕಾರಣ ನೂರಾರು ಕೇಸುಗಳಲ್ಲಿ ನಿವೃತ್ತಿ ಹೊಂದಿದ ನೌಕರನು ಕಾಲವಾದ ಅಥವಾ ಗತಿಸಿದ 8-9 ವರ್ಷಗಳ ತರುವಾಯ ಆ ಪೆನ್ ಷನ್ ಪೇಪರುಗಳನ್ನು ಪಾಸ್ ಮಾಡಿ ಕಳುಹಿಸುತ್ತಿದ್ದಾರೆ. ಇಂಥಾ ನಿದರ್ಶನಗಳು ನನಗೆ ಗೊತ್ತಿ ರುವ ಹಾಗೆ ನೂರಾರಿವೆ. ಇದೇ ವಿಚಾರವನ್ನು ಆಡಿಟರ್ ಅವರ ರಿಪೋರ್ಟಿನಲ್ಲೂ ಬರೆದಿರುತ್ತದೆ. ಆ ವರದಿಯಲ್ಲಿ ಏನು ಬರೆದಿದ್ದಾರೆಂದರೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ನಾವು ಕೊಟ್ಟಿ ರುವ ಸೂಚನೆಗಳನ್ನು ಸರಿಯಾಗಿ ಪಾಲನೆ ಮಾಡುತ್ತಿಲ್ಲ, ಸರ್ಕಾರದವರು ಕೂಡಲೆ ಈ ಬಗ್ಗೆ ನಿಗ ಹರಿಸಬೇಕು ಎಂಬುದಾಗಿ ಬರೆದಿದ್ದಾರೆ. ಆದುದರಿಂದ ಹೀಗೆ ಸರ್ವೀಸಿನಿಂದ ನಿವೃತ್ತರಾಗತಕ್ಕ ನೌಕರರ ವಿಚಾರದಲ್ಲಿ ಸರ್ಕಾರದವರು ಹೆಚ್ಚು ನಿಗಾ ತೆಗೆದುಕೊಂಡು ಅವರಿಗೆ ಸಕಾಲದಲ್ಲಿ ನಿವೃತ್ತಿ ವೇತನದ ಅನುಕೂಲ ಸಿಗುವಂತೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಡಿಮ್ಯಾಂಡ್ ನಂ. 54—ಲೋನ್ಸ್ ಅಂಡ್ ಅಡ್ವಾನ್ಸ್‌ಗಳ ವಿಚಾರದಲ್ಲಿ ನಾನು ಒಂದು ಕಟ್‌ಮೋಷನ್ ಸಹಾ ಕಳುಹಿಸಿದ್ದೇನೆ. ಈ ವಿಚಾರದಲ್ಲಿ ಸರ್ಕಾರದವರ ನೀತಿ ಕೇಂದ್ರ ಸರ್ಕಾರ ದವರ ಹಾಗೂ ನಮ್ಮ ಮೈಸೂರು ಸರ್ಕಾರದವರ ನೀತಿ ಒಬ್ಬೊಬ್ಬರದು ಒಂದೊಂದು ರೀತಿಯಾಗಿದೆ. ಆಹಾರವನ್ನು ಕೊಳ್ಳುವುದಕ್ಕೆ, ಕೆಲವರ ಪೆನ್‌ಷನ್ ಹೆಚ್ಚಿಸುವುದಕ್ಕೆ ಹೀಗೆ ಇನ್ನೂ ಯಾವು ಯಾವುದೋ ಸಾವಿರಾರು ಕಾರಣಗಳನ್ನು ಕೊಡುತ್ತಾ ಸಿಕ್ಕಿದ ಕಡೆಗಳಲ್ಲೆಲ್ಲಾ ಸಾಲ ಎತ್ತುವುದಕ್ಕೆ ನಮ್ಮ ಸರ್ಕಾರದವರು ಕೈಹಾಕಿದ್ದಾರೆ. ಈ ದಿವಸ ಹೀಗೆ ಕೋಟ್ಯಂತರ ರೂಪಾಯಿಗಳನ್ನು ಸಾಲ ಮಾಡಿ ದೇಶವನ್ನು ಈಡು ಹಾಕುವ ಮಟ್ಟಕ್ಕೆ ಬಂದಿದ್ದಾರೆ. ಇದು ಹೀಗೇ ಮುಂದುವರೆದರೆ ಇನ್ನು ಕೆಲವು ವರ್ಷಗಳಲ್ಲೇ ಇವರು ಈ ಮೈಸೂರು ರಾಜ್ಯವನ್ನು ಮಾರಾಟ ಮಾಡುವ ಸ್ಥಿತಿಗೆ ತಂದರೂ ತರ ಬಹುದು. ಆದುದರಿಂದ ನಾನು ಹೇಳುತ್ತೇನೆ—ಈ ದಿವಸ ಯಾರು ರಾಜ್ಯದ ಆಡಳಿತ ನಡೆಸತಕ್ಕ ಜವಾಬ್ದಾರಿಯನ್ನು ಹೊತ್ತಿದ್ದಾರೋ ಈ ಜನರು ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೆ ತಂದು ದೇಶದ ಅಭಿವೃದ್ಧಿಯನ್ನು ಸಾಧಿಸುತ್ತೇವೆಂದು ಹೇಳಿಕೊಳ್ಳುತ್ತಾ ಕೋಟ್ಯಾನು ಕೋಟಿ ರೂಪಾಯಿ ಗಳ ಸಾಲವನ್ನು ಎತ್ತುತ್ತಿರುವುದು ನಮಗೆಲ್ಲರಿಗೂ ಗೊತ್ತಾಗಿದೆ. ಆದುದರಿಂದ ಇನ್ನುಮುಂದಕ್ಕೆ ಈ ಮಂತ್ರಿಮಂಡಲಕ್ಕೆ, ಇಲ್ಲವೇ ದೇಶದ ಆಡಳಿತ ಜವಾಬ್ದಾರಿಯನ್ನು ಹೊತ್ತಿರುವ ಈ ಜನರಿಗೆ ಹೀಗೆ ಸಾಲ ಎತ್ತುವ ಹಕ್ಕು ಇರಬಾರದು ಎಂತಲೂ, ಇವರು ಹೀಗೆ ಸಾಲ ಎತ್ತಿ ದೇಶಕ್ಕೆ ಮಾಡತಕ್ಕ ಅನುಕೂಲಕ್ಕಿಂತ ಹತ್ತರಷ್ಟು ಜನರಿಗೆ ತೊಂದರೆಯಾಗುತ್ತದೆ ಎಂತಲೂ, ಇದರಿಂದ ಒಂದು ಕಾನೂ ನನ್ನು ಮಾಡಿ ಇವರು ಸಾಲ ಎತ್ತುವುದಕ್ಕೆ ಅವಕಾಶವಿಲ್ಲದಂತೆ ಮಾಡತಕ್ಕ ಕಡೆಗೆ ಈ ಮಾನ್ಯ ಸಭೆಯು ಗಮನ ಹರಿಸಬೇಕಾದ್ದು ಅತ್ಯಗತ್ಯ ಎಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸು ತ್ತೇನೆ.

ಶ್ರೀ ಎ. ಆರ್. ಪಂಚಗಾವಿ (ಅರಭಾವಿ).—ಸ್ವಾಮಿ, ನಾನು ಈ ಬೇಡಿಕೆಗಳನ್ನು ಅನು ಮೋದಿಸುತ್ತಾ—ಉಳಿದ ವಿಷಯಗಳಲ್ಲಿ ಹೆಚ್ಚು ಮಾತನಾಡದೆ, ಎಕ್ಸೈಜ್ ವಿಚಾರದಲ್ಲಿ ಅಂದರೆ ಅರ್ಥಾತ್ ಈ ಪಾನನಿರೋಧದ ವಿಚಾರವಾಗಿ ನಾಲ್ಕು ಮಾತುಗಳನ್ನು ಹೇಳಬಯಸುತ್ತೇನೆ:

ಅನೇಕ ನನ್ನ ಗೆಳೆಯರು ಇಲ್ಲಿಯವರೆಗೂ ಈ ವಿಚಾರವನ್ನು ಮಾತನಾಡುತ್ತಾ ಪಾನನಿರೋಧ ವನ್ನು ಜಾರಿಯಲ್ಲಿಟ್ಟಿರುವುದರಿಂದ ದೇಶದಲ್ಲಿ ಬಹಳ ಅನಾಹುತಗಳಾಗುತ್ತಿವೆ ಎಂಬುದಾಗಿ ಮಾತ ನಾಡುತ್ತಾ, ಕೂಡಲೆ ಇದನ್ನು ತೆಗೆದುಹಾಕಬೇಕು, ಇದನ್ನು ಇಟ್ಟಿರುವುದರಿಂದ ಅನೇಕ ಕೂಲಿಗಾರರ

ಮನೆಗೆ ಭೂತ ಪ್ರವೇಶ ಮಾಡಿದಂತಾಗಿದೆ, ಇದು ಇರುವುದರಿಂದ ಪ್ರತಿ ಒಂದು ಮನೆಗೂ ಭೂತ ಹೊಕ್ಕ ಹಾಗಾಗಿದೆ ಎಂಬುದಾಗಿ ಹೇಳಿದ್ದಾರೆ. ಆದರೆ ಈ ಪಾನನಿರೋಧವನ್ನು ಜಾರಿಗೆ ತರುವ ಮೊದಲು ಈ ಬಗ್ಗೆ ಏನು ಪರಿಸ್ಥಿತಿಯಿತ್ತು, ಇದನ್ನು ಜಾರಿಗೆ ತಂದ ಬಳಿಕ ಏನು ಪರಿಸ್ಥಿತಿ ಬದಲಾಯಿಸಿವೆ ಎಂಬುದಾಗಿ ಎರಡನ್ನೂ ಗಮನದಲ್ಲಿಟ್ಟುಕೊಂಡು ಹೇಳುವುದಾದರೆ, ಪಾನನಿರೋಧವನ್ನು ಜಾರಿಗೆ ತರುವುದಕ್ಕೆ ಮೊದಲೂ ಇಲ್ಲಿ ಇಲಿಸಿಟ್‌ ಡಿಸ್ಟಿಲೇಷನ್ ನಡೆಯುತ್ತಲೇ ಇತ್ತು. ಆದರೆ ಈಗ ಇದು ಸ್ವಲ್ಪಮಟ್ಟಿಗೆ ಹೆಚ್ಚಿರಬಹುದು. ಆದಾಗ್ಯೂ ಇದನ್ನು ಪೋಲೀಸರ ಸಹಾಯದಿಂದ ಅಕ್ರಮ ನಡವಳಿಕೆ ನಡೆಯತಕ್ಕ ಜನರನ್ನು ಕಂಡುಹಿಡಿದು ಅವರಿಗೆ ಶಿಕ್ಷೆಯನ್ನು ಮಾಡಿಸುತ್ತಿದ್ದಾರೆ. ಅಷ್ಟು ಹೊರತು ಮೊದಲು ದೇಶದಲ್ಲಿ ಇಲಿಸಿಟ್ ಡಿಸ್ಟಿಲೇಷನ್ನೇ ಇರಲಿಲ್ಲ ಎಂಬುದು ಅದೊಂದು ಉತ್ಪ್ರೇಕ್ಷೆ ಎಂದು ಹೇಳುತ್ತೇನೆ. ಹಾಗೆ ಇರಲಿಲ್ಲವೆಂದು ಹೇಳುವುದು ಶುದ್ಧ ತಪ್ಪು. ಈಗಲೂ ಇಲ್ಲಿ ಪಾನನಿರೋಧವನ್ನು ಯಶಸ್ವಿಗೊಳಿಸುವುದಕ್ಕೆ ಅವಕಾಶವಿದೆ. ಇದನ್ನು ಯಶಸ್ವಿಯಾಗಿ ಆಚರಣೆಗೆ ತರಬಹುದು ಎಂದು ಹೇಳುತ್ತೇನೆ ಇದು ಸಾಧ್ಯವಿದೆ. ಪಾನಪ್ರತಿಬಂಧದಿಂದ ನಮ್ಮ ದೇಶಕ್ಕೆ ಬಹಳ ಅನುಕೂಲವಿದೆ. ಇಲ್ಲಿ 100ಕ್ಕೆ 98 ಜನರು ಕುಡಿತಕ್ಕೆ ವಿರೋಧಿಗಳಾಗಿದ್ದಾರೆ. ಇನ್ನು 100ಕ್ಕೆ ಎಲ್ಲೋ ಅಲ್ಲೊಂದು ಇಲ್ಲೊಂದರಂತೆ ಒಬ್ಬೊಬ್ಬರು ಕುಡಿಯಬಹುದು ; ಅವರು ಈ ಕುಡಿತ ಇರಬೇಕು ಎಂದು ಹೇಳಬಹುದು. ಆದರೆ ಅವರೂ ಸಹಾ ಏನೋ ಒಂದು ಚಟಕ್ಕೆ ಸಿಕ್ಕಿ ಬಿದ್ದು ಕುಡಿಯುತ್ತಿದ್ದರೂ ಇದನ್ನು ಕೆಟ್ಟದ್ದೇ ಎಂದೇ ಹೇಳುತ್ತಾರೆ. ಆದುದರಿಂದ ಪಾನಪ್ರತಿಬಂಧವನ್ನು ಕಡ್ಡಾಯವಾಗಿ ಜಾರಿಗೆ ತರಬೇಕೆಂದೇ ಹೇಳುತ್ತೇನೆ. ಆದರೆ ಇನ್ನೂ ಈಗತಾನೆ ಕೆಲವು ಮಾನ್ಯ ಸದಸ್ಯರು ಹೇಳಿದರು—ಹೆಣ್ಣು ಮಕ್ಕಳು ಕೂಡ ಈಗ ಕುಡಿಯುವುದಕ್ಕೆ ಪ್ರಾರಂಭ ಮಾಡಿದ್ದಾರೆ ಎಂದು. ಆದರೆ ಹಾಗೆ ಎಲ್ಲೋ ಕ್ವಚಿತ್ ಒಬ್ಬೊಬ್ಬರು ಅಂಥಾ ದುರ್ಮಾರ್ಗಕ್ಕೆ ಬಿದ್ದಿರಬಹುದು. ಇದು ಎಲ್ಲೋ ಅಲ್ಲೊಬ್ಬರು ಇಲ್ಲೊಬ್ಬರು ದುರ್ಮಾರ್ಗಕ್ಕೆ ಬಿದ್ದಿದ್ದರೆ ಎಲ್ಲಾ ಹೆಣ್ಣು ಮಕ್ಕಳೂ ಕುಡಿಯುತ್ತಾರೆಂದು ಹೇಳುವುದು ಶುದ್ಧ ತಪ್ಪು. ಆದರೆ ಇದನ್ನೇ ಒಂದು ಕಾರಣ ಮಾಡಿ ಪಾನಪ್ರತಿಬಂಧವನ್ನು ರದ್ದುಮಾಡಿ ಎಂದು ಹೇಳುವುದು ಸರಿಯಲ್ಲ. ಪಾನಪ್ರತಿಬಂಧವನ್ನು ರದ್ದುಮಾಡುವುದಕ್ಕೆ ಇದು ಅಂಥಾ ಒಂದು ಪ್ರಬಲವಾದ ಕಾರಣವಲ್ಲ. ಜನರು ಕೆಟ್ಟದ್ದನ್ನು ಪಾನ ಮಾಡುತ್ತಾರೆ, ಆದುದರಿಂದ ಪಾನಪ್ರತಿಬಂಧಕ ಇರಕೂಡದು ಅನ್ನುವ ಕಾರಣ ಕಾರಣವೇ ಅಲ್ಲ. ಕುಡಿತದಲ್ಲಿ ನಿಷಾ ಮಾಡುವುದರಲ್ಲಿ ಇದು ಒಳ್ಳೆಯದು ಇದು ಕೆಟ್ಟದ್ದು ಎಂದು ಭೇದ ಮಾಡುವುದಕ್ಕಾಗುವುದಿಲ್ಲ. ನಿಷಾ ತರತಕ್ಕ ವಸ್ತುಗಳೆಲ್ಲಾ ಕೆಟ್ಟವುಗಳೇ. ಆದರೆ ಕೆಲವರು ಹೇಳಿದಂತೆ ಇಲಿಸಿಟ್ ಡಿಸ್ಟಿಲೇಷನ್ನಿನಲ್ಲಿ ಅಮೋನಿಯಂ ಸಲ್ಫೇಟನ್ನು ಸೇರಿಸುತ್ತಾರೆಂದು ಹೇಳಿದ್ದು ನಿಜ. ಇಲಿಸಿಟ್ ಡಿಸ್ಟಿಲೇಷನ್ ಪಾನವನ್ನು ಯಾವ ರೀತಿಯಲ್ಲಿ ಮಾಡಿದರೂ ಅದರಿಂದ ಕೆಟ್ಟ ಪರಿಣಾಮವಾಗುತ್ತದೆಂಬ ಅರಿವು ಕುಡಿಯತಕ್ಕವನಿಗೆ ಬರಬೇಕು. ಆ ಪರಿಜ್ಞಾನ ಬಾರದಿದ್ದರೆ ಇದನ್ನು ರದ್ದುಮಾಡಿ ಎಂದು ಹೇಳುವುದು ಸರಿಯಲ್ಲ. ನಮ್ಮ ದೇಶದಲ್ಲಿ ಇಂದು ಒಂದಲ್ಲಾ ಒಂದು ರೀತಿಯಲ್ಲಿ ನಾನಾ ತರಹೆಯ ಅಪರಾಧಗಳು ನಡೆಯುತ್ತಲೇ ಇರುತ್ತವೆ. ಆದುದರಿಂದ ಅವುಗಳನ್ನು ತಡೆಗಟ್ಟುವುದಕ್ಕಾಗಿ ಮಾಡಿರತಕ್ಕ ಖಾಯಿದೆಗಳನ್ನು ತೆಗೆದುಹಾಕಬೇಕು ಎಂದು ಹೇಳತಕ್ಕದ್ದು ಶುದ್ಧ ತಪ್ಪು ಎಂದು ಹೇಳುತ್ತೇನೆ. ಇನ್ನು ಕೆಲವರು ಇದನ್ನು ತೆಗೆದುಹಾಕಿದರೆ ನಮಗೆ ದುಡ್ಡನ್ನು ಗಳಿಸುವುದಕ್ಕೆ ಒಂದು ದಾರಿಯಾಗುತ್ತದೆ ಎಂದು ಹೇಳಿದ್ದು ತತ್ವಕ್ಕೆ ತದ್ವಿರುದ್ಧವಾದ ಮಾತು. ನಮ್ಮದು ಪೋಲೀಸ್ ರಾಜ್ಯವಲ್ಲ, ಇದು ಜನರ ಕಲ್ಯಾಣ ಸಾಧಿಸುವ ಸುಖೀರಾಜ್ಯ. ಈ ದೇಶದಲ್ಲಿ ಕುಡಿಯುವುದಕ್ಕೆ ಒಂದಲ್ಲಾ ಒಂದು ರೀತಿಯಲ್ಲಿ ಅವರಿಗೆ ಅನುಕೂಲ ಮಾಡಿಕೊಟ್ಟು ಹೆಚ್ಚಿಗೆ ಅಂಗಡಿಗಳನ್ನು ತೆರೆಯುವುದಕ್ಕೆ ಸುಖೀರಾಜ್ಯದಲ್ಲಿ ಅವಕಾಶ ಇಲ್ಲ. ಈ ಕುಡಿಯುವುದರಿಂದ ಎಷ್ಟೋ ದುಷ್ಪರಿಣಾಮಗಳಾಗುತ್ತಿವೆ. ಇದನ್ನು ಎಲ್ಲರೂ ಮನಗಂಡಿದ್ದಾರೆ ; ಮತ್ತು ಪಾನ ರದ್ದುಮಾಡಲಿ ಎಂದು ಹೇಳುತ್ತಿದ್ದಾರೆ. ಇದರಿಂದ ಈ ಸಣ್ಣ ಕಾರಣಕ್ಕಾಗಿ, ದೇಹದ ಒಂದು ಭಾಗಕ್ಕೆ ಸ್ವಲ್ಪ ನೋವಾಗಿದೆ ಎಂದು ಇಡೀ ದೇಹದ ಅಂಗವನ್ನೇ ಕಡಿದುಹಾಕುವುದು ತಪ್ಪಾಗುತ್ತದೆ. ರಾಜಾಜಿಯವರು ಹೇಳುತ್ತಾರೆ, ಸೇಲ್ಸ್‌ಟ್ಯಾಕ್ಸ್ ಪಾನ ಪ್ರತಿಬಂಧದ ಕೊರತೆಯನ್ನು ತುಂಬಿಕೊಳ್ಳುವುದಕ್ಕಾಗಿ ಎಂದು. ಈಗ ಅದರ 10ರಷ್ಟು ವಸೂಲು ಮಾಡುತ್ತಿದ್ದಾರೆ. ಹಿಂದೆ ಆರು ಕೋಟಿಯಿಂದ ಪ್ರಾರಂಭವಾದ ಸೇಲ್ಸ್‌ಟ್ಯಾಕ್ಸ್ ಇಂದು ಮೂವತ್ತು ಕೋಟಿ ರೂಪಾಯಿಗೆ ಬಂದು ಮುಟ್ಟಿದೆ. ಪಾನ ಪ್ರತಿಬಂಧ ರದ್ದುಮಾಡಿದರೆ ಇಷ್ಟು ಟ್ಯಾಕ್ಸ್ ಬರಲಾರದು. ಈ ಕುಡಿಯಲಿಕ್ಕೆ ಪ್ರಾರಂಭವಾದರೆ, ನಾಟಕ ನೋಡುವುದು, ಸಿನೇಮಾ ನೋಡುವುದು, ಮತ್ತು ಇತರ ವ್ಯಾಪಾರ ಸಹಿತ ಕಡಿಮೆಯಾಗುತ್ತದೆ. ಪಾನ ಪ್ರತಿಬಂಧಕದಿಂದ ಆರ್ಥಿಕ ಮಟ್ಟವು ಬೆಳೆಯುತ್ತದೆ ಅಲ್ಲದೆ ಕಡಿಮೆಯಾಗುವುದಿಲ್ಲ. ಅದರಿಂದ ಒಂದು ಊರಿನಲ್ಲಿ ಬೊಬ್ಬೆ ಆಗಬಹುದು, ಒಂದು ಊರಿನೊಳಗೆ ಏನಾದರೂ ಒಂದು ಸುದ್ದಿಯಾದರೆ, ಅದು ಊರೊಳಗೆ ಹರಡುತ್ತದೆ, ಒಂದು ಕೊಲೆಯಾದರೆ, ಅದು ಊರೆಲ್ಲಾ ಹರಡುತ್ತದೆ. ಒಬ್ಬ ಮನುಷ್ಯ ಕುಡಿದರೆ

(ಶ್ರೀ ಎ. ಆರ್. ಪಂಚಗಾವಿ)

ಅದು ಕೂಡ ಊರೆಲ್ಲಾ ಸುದ್ದಿಯಾಗುತ್ತದೆ. ನಮ್ಮ ದೇಶದಲ್ಲಿದ್ದಷ್ಟು ಪಾನನಿರೋಧಕ್ಕೆ ಅನುಕೂಲ ವಾತಾವರಣ ಇನ್ನು ಯಾವ ದೇಶದಲ್ಲೂ ಇಲ್ಲ. ಆದರೂ ಕೂಡ ನಾವು ಯಾವುದನ್ನೂ ಮಾಡಿ ತೋರಿಸಿದರೆ, ಇಡೀ ಜಗತ್ತಿಗೆ ಒಂದು ಪಾಠ ಹಾಕಿಕೊಟ್ಟಂತಾಗುತ್ತದೆ. ನಾವು ಇದನ್ನು ಕೈಬಿಟ್ಟರೆ ಏನೂ ಮಾಡುವುದಕ್ಕಾಗುವುದಿಲ್ಲ. ಅಷ್ಟು ಸುಲಭವಾಗಿ ಇದನ್ನು ಕೈಬಿಡಲಿಕ್ಕೆ ಮನಸ್ಸು ಮಾಡಬಾರದು. ಈ ನೆವಗಳನ್ನು ಮುಂದೆ ಮಾಡಿಕೊಂಡು ಈ ವೆಲ್‌ಫೇರ್‌ನ ಬುನಾದಿಯನ್ನು ಕೈಬಿಡಬಾರದು ಎಂದು ಹೇಳುತ್ತಿದ್ದೇನೆ. ನಾಳೆ ಪ್ರೊಹಿಬಿಷನ್ ರದ್ದು ಆದ ಮೇಲೆ ಕಾಲೇಜು ಹುಡುಗರು ಕುಡಿಯಬಹುದು, ಕಾಲೇಜುಗಳಲ್ಲಿ ಪಾರ್ಟಿಗಳು ನಡೆಯಬಹುದು ; ಜಡ್ಜ್‌ಗಳು ಕುಡಿಯಬಹುದು. ಹಿಂದೆ ಬ್ರಿಟಿಷರು ಇದ್ದಾಗ ಏನಾಗುತ್ತಿತ್ತು ಎಂದು ನೋಡುತ್ತಿದ್ದೆವು. ಒಬ್ಬ ಕಲೆಕ್ಟರ್ ಇನ್‌ಸ್ಪೆಕ್ಷನಿಗೆ ಬಂದರೆ, ಅವನಿಗೆ ಎಲ್ಲಾ ರೆವೆನ್ಯೂ ಸ್ಟಾಫಿನವರು ಪಾರ್ಟಿ ಕೊಡಬೇಕಾಗಿತ್ತು. ಅಲ್ಲಿ ಯಾರಾದರೂ ಕಂಟ್ರಾಕ್ಟರ್ಸ್ ಬಂದು ಅವರಿಗೆ ಅಲ್ಲಿ ಕುಡಿಸಬೇಕು. ಅದೇ ರೀತಿ ಡಿ.ಎಸ್.ಪಿ. ಬಂದಾಗ ಕೂಡ ಮಾಡಬೇಕಾಗಿತ್ತು. ಇಂದು ಅದೆಲ್ಲಾ ಕಡಿಮೆಯಾಗಿದೆ. ಪೂರ್ಣವಾಗಿ ಎಲ್ಲಾ ಅಧಿಕಾರಿಗಳು ಬಿಟ್ಟಿದ್ದಾರೆಂದು ಹೇಳುವುದಕ್ಕಾಗುವುದಿಲ್ಲ. ಕೆಲವರು ಹೇಳುತ್ತಿದ್ದಾರೆ, ಮಾರ್ಕೆಟ್ಟಲ್ಲಿ ಬೆಲ್ಲ ಕೂಡ ಮಾಯವಾಗುತ್ತಿದೆ ಎಂದು ; ನಾಳೆ ಗ್ರೇಪ್ಸ್ ಮಾಯವಾಗುತ್ತಿದೆ, ಹಣ್ಣುಹಂಪಲು ಎಲ್ಲಾ ಮಾಯವಾಗಬಹುದು. ಹಾಗೆ ಅನೇಕ ಕಾಡಿನ ಸಂಪತ್ತು ಕೂಡ ಈ ಸುರೆಗೆ, ಇದರ ತಯಾರಿಕೆಗೆ ಹೋಗುತ್ತದೆ. ಆಮೇಲೆ ಅಕ್ಕಿ ಕೂಡ ಹೋಗುತ್ತದೆ. ಈ ಪಾನವನ್ನು ಬೆಳೆಸುವುದರಿಂದ ಲಾಭವೇನೂ ಇಲ್ಲ.

5.00 P.M.

ಇನ್ನು ಒಂದು ಮಾತನ್ನು ಹೇಳಬಯಸುತ್ತೇನೆ. 1962ರ ಮುಂಚೆ ಪಾನ ಪ್ರತಿಬಂಧ ಸ್ವಲ್ಪ ಬಿಗಿಯಾಗಿ ಜಾರಿಯಲ್ಲಿತ್ತು. ಅದರ ನಂತರ ಸಡಿಲವಾಗುತ್ತಾ ಬಂದಿದೆ. ಇದಕ್ಕೆ ಕಾರಣ ಇಡೀ ದೇಶದ ವಾತಾವರಣ ಇದ್ದರೂ ಇರಬಹುದು. ಮಹಾರಾಷ್ಟ್ರದೊಳಗೆ, ಕೇಂದ್ರ ಸರ್ಕಾರದೊಳಗೆ, ಸಡಿಲ ಮಾಡುತ್ತೇವೆಂದು ಮಾತನಾಡಿದರೆ, ಜನರು ಏನು ಇದು ಒಂದು ಬೇಗ ಹೋಗುತ್ತದೆ ಎಂದು ಸಂತೋಷಪಡುವವರಿದ್ದಾರೆ, ಅದರಿಂದ ಕಂಟ್ರಾಕ್ಟರ್ಸ್, ಗುತ್ತಿಗೆದಾರರು ಅದರ ದಾರಿಯನ್ನು ನೋಡುತ್ತಿರುತ್ತಾರೆ. ಎಂದು ನಾವು ಇದರಿಂದ ಹಣ ಸಂಪಾದನೆ ಮಾಡಿ ಶ್ರೀಮಂತರಾದೇವು, ಉಪ್ಪರಿಗೆ ಮನೆ ಕಟ್ಟೇವು ಎಂಬುವನ್ನೆಲ್ಲಾ ಕನಸು ಕಾಣುವವರಿದ್ದಾರೆ. ಅದೇ ರೀತಿ ತಾತ್ಸಾರ ರೀತಿಯಿಂದ ನೋಡುವವರೂ ಇದ್ದಾರೆ. ದುರ್ದೈವದಿಂದ ಯಾವ ಸಮಾಜ ಕುಡಿಯುತ್ತದೆಯೋ, ಆ ಸಮಾಜ ರದ್ದುಮಾಡಲಿ ಎಂದು ಹೇಳುತ್ತಿದ್ದಾರೆ. ಆ ಸಮಾಜ ಪಾನ ಪ್ರತಿ ಪ್ರತಿಬಂಧಕದಿಂದ ಎಷ್ಟು ಜನರು ಸುಖ ಪಡೆದಿದ್ದಾರೆ, ಎಷ್ಟು ಜನ ಅನೇಕ ರೀತಿಯ ಸಂಪಾದನೆ ಮಾಡಿದ್ದಾರೆ, ಅದರಿಂದ ಲಾಭ ಪಡೆದಿದ್ದಾರೆ ಎಂಬುದನ್ನು ಯೋಚಿಸಬೇಕು. ಇದನ್ನೆಲ್ಲಾ ಕಂಡುಕೊಂಡು ಎಲ್ಲಿಯೋ ನಾಲ್ಕು ಮಂದಿ ಕುಡಿಯುತ್ತಾರೆ, ಅದಕ್ಕೆ ಪಾನನಿರೋಧವನ್ನು ರದ್ದುಮಾಡಿ ಎಂದು ಹೇಳಿದರೆ ಅದು ಒಳ್ಳೆಯದಲ್ಲ. ಇವತ್ತು ನಾಲ್ಕು ಕೋಟಿ ರೂಪಾಯಿ ಹೆಚ್ಚು ಸಿಗಬಹುದು. ಅದರಿಂದ ಜನತೆಯ ದುಡ್ಡು ಬೊಕ್ಕಸಕ್ಕೆ ಎಷ್ಟು ದುಡ್ಡು ಹೋಗುತ್ತದೆ, ಗುತ್ತಿಗೆದಾರರಿಗೆ ಎಷ್ಟು ತಯಾರಿಕರಿಗೆ ಎಷ್ಟು ಕೊಡಬೇಕು, ಸಿಬ್ಬಂದಿಯವರಿಗೆ ಎಷ್ಟು ಕೊಡಬೇಕೆಂಬುದನ್ನೆಲ್ಲಾ ತಿಳಿದುಕೊಳ್ಳಬೇಕು. ಏನೋ ನಾಲ್ಕು ದುಡ್ಡು ಸಿಗುತ್ತದೆಂದು ಅದಕ್ಕೆ ಕೈಹಾಕುವುದು ತಪ್ಪು. ಇನ್ನು ಈ ಭೂಕಂದಾಯವನ್ನು ರದ್ದುಮಾಡುವುದಾಗಿ ಹೇಳುತ್ತಿದ್ದಾರೆ. ಆದರೆ ಇದನ್ನು ಮಾಡುವಾಗ ಮಾತ್ರ ಯಾರಿಗೂ ನೋವಾಗದ ಹಾಗೆ ಮಾಡಬೇಕೆಂದು ಹೇಳುತ್ತೇನೆ. ನಾವು ಇವತ್ತಿನ ದಿವಸ ಏನೊಂದು ಕಲ್ಯಾಣ ಕೆಲಸ ಮಾಡಲಿಕ್ಕೆ ಹೋಗುತ್ತೇವೆ, ಅದರಿಂದ ಜನತೆಯನ್ನು ಕುಡಿಯಲಿಕ್ಕೆ ಹಚ್ಚಿ, ಆ ತರದ ಒಂದು ನೀತಿಯನ್ನು ಮಾಡುವುದು ಬೇಡ. ಇದನ್ನು ನಾವು ಪೂರ್ಣ ವಿಚಾರ ಮಾಡಬೇಕೆಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—The whip said that he will send me a revised list which he has not sent me so far. At this rate I will call upon the Hon'ble Minister to reply regardless of whoever has participated. The whips have to meet and try to help me.

Sri D. M. SIDDIAH (Biligere).—We have met and decided on the apportionment of time.

† ಶ್ರೀ ಎಸ್. ಎಸ್. ಶೆಟ್ಟರ್ (ಹುಬ್ಬಳ್ಳಿ).—ಮಾನ್ಯ ಸಭಾಪತಿಗಳೇ, ಜಗತ್ತಿಗೆ ಪಾಠವನ್ನು ಕಲಿಸಿದಂಥ ಮಹಾತ್ಮ ಗಾಂಧಿಯವರ ಕಾಲ ಹೋಯಿತು. ಜಗತ್ತೇ ಬಂದು ಇವತ್ತು ಬುದ್ಧಿ ಕಲಿಸಿದರೂ ಬುದ್ಧಿ ಕಲಿಯದಂಥ ಅವರ ಶಿಷ್ಯರ ಕಾಲ ಬಂತು. ಈ ರೀತಿ ಹೇಳಿದರೆ ಸತ್ಯಕ್ಕೆ ದೂರವಾಗಲಿಕ್ಕಿಲ್ಲ. ಆ ಒಂದು ನಿರ್ಣಯಕ್ಕೆ ಈ ಸರ್ಕಾರಕ್ಕೆ ಬಂದಿದೆ. ಆ ಒಂದು ನಿರ್ಣಯವೆಂದರೆ ಪಾನನಿರೋಧವನ್ನು ಸಡಿಲಿಸುವುದು, ಈ ಕಾನೂನನ್ನು ತೆಗೆದು ಹಾಕುವುದು, ಇದರಿಂದ ಬರುವ ದುಡ್ಡನ್ನು ಯೋಜನೆಗಳಿಗೆ ಉಪಯೋಗ ಮಾಡುವುದು. ಈಗ ಅನೇಕ ಸಾಮಾನ್ಯ ಜನರ ಮೇಲೆ ಸೇಲ್ಸ್ ಟ್ಯಾಕ್ಸ್, ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಬೀಳುತ್ತಿದೆ. ಈ ಭಾರವನ್ನು ಅವರು ತಡೆಯಲಾರರು, ಅದನ್ನು ಇಳಿಸಬೇಕೆಂದು ನಾವು ಇಲ್ಲಿ ಅನೇಕ ಸಲ ಚರ್ಚೆಗಳನ್ನು ಮಾಡಿದ್ದೇವೆ. ಇಂತಹ ಚರ್ಚೆಗಳು ನಡೆದರೂ ಸಹ ಈ ಭಾರಗಳು ಮಾತ್ರ ಇಳಿಯಲಿಲ್ಲ. ಈ ಕುಡಿಯುವಂತಹ ಚಟವಿಲ್ಲದವರಿಗೆ ಈ ಪ್ರೊಹಿಬಿಷನ್ ಹೋಗುತ್ತದೆ ಎಂದರೆ ವ್ಯಸನವಾಗುತ್ತದೆ. ಈ ಬಡ್ಜೆಟ್ಟಿನಲ್ಲಿ ಹೇಳಿದಂಥ ಕೆಲವು ಅಂಶಗಳನ್ನು ಅಂದರೆ, ಎಕ್ಸೈಸ್ ಡ್ಯೂಟಿ ಮತ್ತು ಇತರ ಅಂಕಿ ಸಂಖ್ಯೆಗಳನ್ನು ಪರಿಶೀಲನೆ ಮಾಡಿ ನೋಡಿದರೆ, ಹೋದ ವರ್ಷ ಏನು ಅಂಕಿ ಸಂಖ್ಯೆಗಳು ಇದ್ದವೋ, ಈ ಸಾಲಿನಲ್ಲೂ ಅಷ್ಟೇ ಇದೆ. ಈ ಪ್ರೊಹಿಬಿಷನ್ ತೆಗೆಯುವುದರಿಂದ ಎಷ್ಟು ಹಣ ಬರಬಹುದು ಎಂಬುದು ಈ ಬಡ್ಜೆಟ್ಟಿನಿಂದ ತಿಳಿಯುತ್ತಿಲ್ಲ. ಒಂದು ಚಿತ್ರವನ್ನು ನಮ್ಮ ಆರ್ಥಿಕ ಮಂತ್ರಿಗಳು ಕೊಟ್ಟಿದ್ದಾರೆ. ಅದು ಯೋಜನೆಯ ಅಂದಾಜಿನ ಮೇಲೆ ಎಷ್ಟು ಬರಬಹುದು ಎಂಬ ಮಾತನ್ನು ಸ್ಪಷ್ಟವಾಗಿ ತಿಳಿಸುವುದು ಸಾಧ್ಯವಿಲ್ಲವೆನ್ನುವುದು ಗೊತ್ತಾಗುತ್ತದೆ. ನನ್ನ ದೃಷ್ಟಿಯಲ್ಲಿ ನಾಲ್ಕು ಕೋಟಿ ಅಥವಾ ನಾಲ್ಕೂವರೆ ಕೋಟಿಗಿಂತ ಮಿಗಿಲಾಗಿ ಬರಬಹುದು. ಇದರಿಂದ ಬರುವ ಆದಾಯದಿಂದ ಜನರ ಭಾರವೇನೂ ಎಳ್ಳಷ್ಟೂ ಕಡಿಮೆಯಾಗುವುದಿಲ್ಲ. ಸೇಲ್ಸ್ ಟ್ಯಾಕ್ಸ್ ಮತ್ತು ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್‌ಗಳನ್ನು ಸಾಕಷ್ಟು ಇಳಿಸಿದ್ದರೆ ಜನಸಾಮಾನ್ಯರಿಗೆ ತೆರಿಗೆಯ ಭಾರ ಕಡಿಮೆಯಾಗುತ್ತಿತ್ತು. ಈ ಸೇಲ್ಸ್ ಟ್ಯಾಕ್ಸ್ ಹಾಕುವುದರಿಂದ ಅನೇಕ ಸಣ್ಣ ಸಣ್ಣ ಉದ್ಯಮಿಗಳು ತಮ್ಮ ಕೈಗಾರಿಕೆಯನ್ನು ನಡೆಸಲು ಸಾಧ್ಯವಾಗದೆ ಬಂದ್ ಮಾಡಿದ್ದಾರೆ. ಆಹಾರ ಧಾನ್ಯದ ಮೇಲೆ ಸೇಲ್ಸ್ ಟ್ಯಾಕ್ಸ್ ಹಾಕಿದ್ದಾರೆ. ನಮ್ಮ ನೆರೆಹೊರೆಯ ರಾಜ್ಯಗಳು ನಮ್ಮ ಕೂಡ ಎಷ್ಟೊಂದು ಸ್ಪರ್ಧೆ ಮಾಡುತ್ತಿವೆಯೆಂದರೆ, ನಮ್ಮ ರಾಜ್ಯದಲ್ಲಿ ಉತ್ಪಾದನೆಯಾಗುವ ವಸ್ತುಗಳು ಬೇರೆ ರಾಜ್ಯಕ್ಕೆ ಹೋದರೆ ಅಲ್ಲಿ ಮಾರಾಟವಾಗುತ್ತಿಲ್ಲ. ಗದುಗಿನಿಂದ ಮತ್ತು ಹುಬ್ಬಳ್ಳಿಯಿಂದ ರೆಡಿಮೇಡ್ ಬಟ್ಟೆಗಳನ್ನು ಮಹಾರಾಷ್ಟ್ರಕ್ಕೆ ಕಳಿಸುತ್ತಿದ್ದರು, ಅದು ಈಗ ನಿಂತುಹೋಗಿದೆ. ಏಕೆಂದರೆ ಅದರಮೇಲೆ ಸೇಲ್ಸ್ ಟ್ಯಾಕ್ಸ್ ಹಾಕಿರುವುದೇ ಕಾರಣ. ಬೇರೆ ರಾಜ್ಯಗಳಲ್ಲಿ ಈ ರೀತಿ ಟ್ಯಾಕ್ಸ್ ಹಾಕುವುದಿಲ್ಲ. ಆದ್ದರಿಂದ ಈ ಬಗ್ಗೆ ಸರಿಯಾದ ಕ್ರಮವನ್ನು ಸರ್ಕಾರದವರು ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ.

ಇನ್ನು ಸಾಲದ ಬಗ್ಗೆ ಹೇಳುವುದಾದರೆ, ಅನೇಕ ಸಂಸ್ಥೆಗಳಿಗೆ ಮತ್ತು ಬ್ಯಾಂಕ್‌ಗಳಿಗೆ ಸಾಲ ಕೊಡುವ ಬಗ್ಗೆ ಸರ್ಕಾರದವರು ಜಾಹಿರು ಮಾಡಿದ್ದಾರೆ, ಕೆಲವು ವಿಚಾರಗಳನ್ನು ನೋಡಿದರೆ ಆನಂದವಾಗುತ್ತದೆ. ಮತ್ತೆ ಕೆಲವು ಕಡೆ ನೋಡಿದರೆ ಸಾಕಷ್ಟು ಆನಂದವಾಗಲಿಕ್ಕಿಲ್ಲವೆಂದು ಹೇಳುತ್ತೇನೆ. ಮನೆಗಳನ್ನು ಕಟ್ಟುವ ಬಗ್ಗೆ ಅನೇಕ ಯೋಜನೆಗಳನ್ನು ಮಾಡಿದ್ದಾರೆ. ಎಲ್.ಐ.ಸಿ.ಯಿಂದ ಹಣವನ್ನು ಪಡೆದು ಈ ಬಾಬಿಗೆ ತೊಡಗಿಸಿದ್ದಾರೆ. ಮನೆಗಳನ್ನು ಕಟ್ಟಿಕೊಳ್ಳಲು ಸಾಕಷ್ಟು ಜನರಿಗೆ ಹೋದ ವರ್ಷ ಹಣವನ್ನು ಕೊಟ್ಟಿದ್ದರು. ಈ ಸಾಲಿನಲ್ಲಿ ಹೆಚ್ಚು ಹಣಕೊಟ್ಟಿಲ್ಲ. ಈ ಪ್ರಕಾರ ಅನೇಕ ವಿಧ ವಿಧವಾದ ರೀತಿಯಲ್ಲಿ ಮನೆ ಕಟ್ಟಿಸುವುದಕ್ಕಾಗಿ ಹಣದ ಸಾಲವನ್ನು ತೆಗೆದಿರಿಸಲಾಗಿದೆ. ಎಷ್ಟೋ ಹರಿಜನರಿಗೆ ಮತ್ತು ಗಿರಿಜನರಿಗೆ ಮನೆಗಳನ್ನು ಕಟ್ಟಿಸುವಂಥ ಯೋಜನೆ ಏನಿದೆ, ಅದಕ್ಕೆ ಒದಗಿಸಿರುವ ಹಣ ನಮ್ಮ ರಾಜ್ಯಕ್ಕೆ ಸಾಕಾಗುವುದಿಲ್ಲವೆಂದು ಹೇಳುತ್ತೇನೆ. ನಮ್ಮ ನೆರೆಯ ರಾಜ್ಯವಾದ ಮದ್ರಾಸ್‌ನಲ್ಲಿ 6 ಕೋಟಿ ರೂಪಾಯಿಗಳನ್ನು ಈ ಒಂದು ಯೋಜನೆಗಾಗಿ ತೆಗೆದಿಟ್ಟಿದ್ದಾರೆ. ಅವರಿಗಾಗಿ ಬೇಕಾದಷ್ಟು ಮನೆಗಳನ್ನು ಕಟ್ಟಿಸುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಈ ಬಾಬಿಗೆ ಇಟ್ಟಿರುವ ಹಣ ಸಾಕಾಗುವುದಿಲ್ಲ. ಏಕೆಂದರೆ ಮನೆಯ ಅಭಾವ ನಮ್ಮಲ್ಲಿ ಬೇಕಾದಷ್ಟು ಇದೆ. ಮನೆ ಕಟ್ಟಿಕೊಳ್ಳಲು ಸಾಲ ಕೊಡುವುದಕ್ಕೆ ಏನು ಒಂದು ನಿಯಮವಿದೆ, ಅದು ಸಾಮಾನ್ಯ ಜನತೆಗೆ ಸರಿಯಾಗಿ ತಿಳಿಯುತ್ತಿಲ್ಲ. ಸ್ವಲ್ಪ ರೀತಿಯಲ್ಲಿ ಅದು ಎಲ್ಲರಿಗೂ ತಿಳಿಯುವಂತೆ ಮಾಡಬೇಕಾಗಿತ್ತು. ಈ ಬಗ್ಗೆ ಅನೇಕ ವಿಧಾನಗಳನ್ನು ಮಾಡಿರುವುದು ಸರಿಯಲ್ಲ. ಇದರಿಂದ ಮನೆ ಕಟ್ಟಬೇಕೆನ್ನುವವರಿಗೆ ಸಾಕಷ್ಟು ಅನುಕೂಲವಾಗಲೀ, ಲಾಭವಾಗಲೀ ಆಗುವುದಿಲ್ಲ. ಕೆಲವು ಪಟ್ಟಣಗಳಲ್ಲಿರುವ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿಗಳು ಏನಿವೆ, ಅವುಗಳಿಗೆ ಸಾಲಕ್ಕಾಗಿ ಅರ್ಜಿಯನ್ನು ಹಾಕಿಕೊಂಡಾಗ ಅವರು ಕೊಟ್ಟಿರುವ ಉತ್ತರವೆಂದರೆ, ಹಳ್ಳಿಗಳಲ್ಲಿ ಮನೆಯನ್ನು ಕಟ್ಟುವುದಾದರೆ, ಹಣವನ್ನು ಕೊಡುತ್ತೇವೆ, ಪಟ್ಟಣಗಳಲ್ಲಿ ಮನೆ ಕಟ್ಟುವ ಹಾಗಿದ್ದರೆ ಹಣ ಕೊಡುವುದಿಲ್ಲವೆಂದು ಸರ್ಕಾರದವರು ಈ ಬಗ್ಗೆ ಏನು ಒಂದು ವ್ಯವಸ್ಥೆ ಮಾಡಿದ್ದಾರೆ, ಅದು ತೊಡಕಿನಿಂದ ಕೂಡಿರುವುದರಿಂದ ಎಲ್ಲರಿಗೂ ಹಣ ಸಿಗುತ್ತಿಲ್ಲ. ಈ ಪ್ರಕಾರವಾಗಬಾರದು. ಹಳ್ಳಿಗಳಲ್ಲಿ ಅಥವಾ ಪಟ್ಟಣ

(ಶ್ರೀ ಎಸ್. ಎಸ್. ಶೆಟ್ಟರ್)

ಗಳಲ್ಲಿ, ಏನೇ ಆಗಲಿ ಸಾಮಾನ್ಯ ವರ್ಗದ ಜನರು ಮನೆ ಕಟ್ಟಿಕೊಳ್ಳಲು ಅನುಕೂಲ ಮಾಡಿಕೊಡಬೇಕು. ಇದರಲ್ಲಿ ವ್ಯತ್ಯಾಸವಿರಬಾರದು. ಸ್ವಲ್ಪ ತಾರತಮ್ಯ ಬೇಕಾದರೆ ಮಾಡಬಹುದು, ಅನೇಕ ತಾರತಮ್ಯವನ್ನು ಸರ್ಕಾರದವರು ಜನರಿಗೆ ತಿಳಿಯದಂತೆ ಮಾಡಿ ಗೊಂದಲವೆಬ್ಬಿಸಬಾರದು.

ಇನ್ನು ತಕಾವಿ ಸಾಲಗಳನ್ನು ಎಲ್ಲರಿಗೂ ಸರಿಯಾಗಿ ಹಂಚಬೇಕು. ಇದರಲ್ಲಿರುವ ಭ್ರಷ್ಟಾಚಾರವನ್ನು ನಿಲ್ಲಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri S. D. KOTHAVALE.—Mr. Speaker, Sir, I rise to support the demands made by the Hon'ble Minister for Finance. As regards Excise, many hon'ble members have expressed their opinion very frankly, some for and some against prohibition. I do not want to speak about that matter today. The Prohibition (Amendment) Bill is coming up for consideration tomorrow. I would like to offer my remarks regarding that matter tomorrow, if you, Sir, would be pleased to give me a chance to speak tomorrow. Of course, I do not ask for a promise for that.

Coming to sales tax, I am inclined to congratulate the Finance Minister and the Commercial Tax Department for showing good recoveries from year to year. The estimate of receipts this time is of the order of Rs. 29 crores. I know that it is still possible to increase the receipts under this. There is a lot of evasion going on and we should try to plug the loopholes so that we can expect, still better recoveries. I do not know whether the present structure of the sales tax is as good as it should be. Different views have been expressed and some experts on the subject suggest that very small levies of half a per cent or one per cent and multi levy of that type would be more useful and people may not try to evade that small percentage of taxation. But, that is a matter to be examined. But the fact remains that there is evasion of tax and if we make good effort to improve the tax structure it is possible to get more revenue from these sources. I would like to place onei particular difficulty which we are experiencing in the borders of Maharashtra State. I am making a reference to the Belgaum District which borders on Kolhapur and Sangli Districts of Maharashtra State. In that area there is our sales tax on jaggery and chillies whereas no such tax is imposed by the Maharashtra Government on these commodities in its area. It appears recently the tax on jaggery which was originally single point has now become multi-point and the rate of taxation has increased by 50 per cent. The effect of this has been to divert trade from such markets as Nippani, Sankeswar to markets within a short distances of these markets in Kolahpur District and Sangli Distict. As a result of this diversion of trade not only the trading community in Nippani and Sankeswar has suffered but the economy of that area also has suffered to a certain extent. The result is loss of sales tax revenue also. Sales tax can be recovered only where there are transactions ; if transactions do not take place in those markets there cannot be recoveries of sales tax or purchase tax in any manner. As I

stated in the beginning, that trade has been diverted to these areas, I do not know whether it would be proper for me to just suggest an amendment in this tax incidence so far as these markets are concerned. I would suggest to the hon'ble the Finance Minister to examine the position whether they can bring about this tax amendment so far as sale or purchase taxes are concerned in Nippani or Sankeswar or similarly situated market yards in the border areas, to bring them in line with the sales tax prevailing in Maharashtra. I think it should be the best principle of taxation particularly in sales tax to see that trade is not diverted on that account, because collection of tax depends on the extent of trade transactions. This principle should be borne in mind so far as the consideration of imposition of sales tax is concerned. Therefore, I would like to suggest to the Government that tax on jaggery and chillies so far as Belgaum is concerned, should be repealed or should not at least exceed a single point, that too at a lower rate of taxation. You may ask whether such an amendment would not be discriminatory in nature. I do not think so taking as I do, the view about the constitutional provisions in that context. There would not be any discrimination in this regard because it is open to anybody and everybody to go to any part of the State, Nippani or Sankeswar, and sell his goods. Nothing prevents a trader or purchaser from going to that market and sell his goods. If at all, there would be a sort of benefit to the State in retaining the trade that is diverted now and helping the economy of the area and get some income to the State Government. There is also a precedent in this respect. If I am not mistaken, in the year 1953-54 the Legislature of the Ex-Bombay State passed an Act in which separate provisions were made in respect of Amreli District. There the sales tax, the rate of it and the incidence were separate from the incidence in other parts of the State. Therefore that position may be examined and some relief given to the trading community and some more income should be secured to the State by rationalising the whole system.

As regards the Agriculture Income Tax, we are thinking of increasing or introducing a sort of slab system in the structure of the Agriculture Income Tax. Probably the Finance Minister may be able to give us an indication as to what they expect even as a result of introduction of slab system as such. As a layman I think we should not expect much from this source. Now the estimate of revenues for the present year 1967-68 from the Agriculture Income Tax is of the order of Rs. 1.75 crores. I think a major portion of this nearly 75 per cent, might be coming from plantation crops, namely, coffee, tea cardamom and such like crops. Most of it may be coming from Coorg District and old Mysore where plantation crops are raised. If my assumption is correct, about 25 per cent may be coming from the commercial products as we call them. It is for the Finance Ministry to consider. We are pinning too much faith in this source of income even as a result of increasing some rates and introducing slab system so far as agricultural income tax on commercial crops is concerned.

(SRI S. D. KOTHAVALE)

5-30 P.M.

If we just consider the recovery and also the total income from commercial products of agriculture, there may not be much income. Therefore it is for the Government to consider this source of income. One more aspect of this question may please be considered. Now we have been trying to introduce the Land Reforms Act. In anticipation of this Act some prudent men have taken care to effect partition in the landed property giving shares to all the members of the family so that they might provide for sufficient protection and see that land Reforms Act did not in any way, affect them. The maximum ceiling limit for agricultural holdings has been fixed. Therefore in view of this division of every landed property, how many land-holders will be called upon to pay the tax at all ? There is a taxation exemption. It is a proposition for the Government to consider whether it is possible and worthwhile to lay much faith in this source of income. I personally feel, though I am not having any figures at my disposal, that every little income can be expected from this. My submission in this connection would be that we should of course have this agricultural income-tax and confine the same to the plantation crops only such as Coffee, Tea and even the cocoons. There will be regular income to the State without much cost of recovery. I am making this plea because there must be some source of income to the Government after abolition of land revenue. While partcipating in the general debate, some members have opined that the abolition of Land Reveune would be going to be helpful to the poor people. The view is not sound, apart from the practical difficulty of finding an alternative source of income to replace it. The proceeds of the land revenue should be exclusively earmarked for the development of the rural areas for giving them minor irrigation, good roads and such other things which, of course, would help to increase agricultural production. The remission of this land revenue is not going to produce any appreciable effect upon the resources of the producers. Rs. 5 per acre is not a big amount. If the land revenue amounting to Rs. 6 crores and odd as at present, is spent in rural areas for giving irrigational facilities and other facilities, it would add to their wealth more. Therefore, I personally feel that there should be a very rational thinking on the abolition of land Revenue. If this is abolished, the loss of Reveune would not be made up by the agricultural income-tax. This is my view and this may be considered carefully.

As regards the loan, some of the Hon'ble members during the general debate have expressed doubt about incurring loans either from the Central Government or from the public or in other ways. The Finance Minister has sufficiently given a fitting reply to that plea. A considerable amount of loan has been channelised for the development of the rural areas, for the development of panchayats and for the upliftment of the agriculturists and also for the development of industrial units. Therefore nobody need have any fear that the loans have been incurred

without any benefit. They have incurred for productive purposes. The only point we have to consider is the recovery of loans. Some Hon'ble members spoke that loans are taken from this Government with the idea that they would not be recovered at all. I think the Government cannot do anything better than to recover the loans strictly and without any fear or favour. The loans must be recovered and they must be properly utilised.

Certain doubts were expressed in regard to the working of the pension rules. They have expressed their concern about undue delay in determining persions. But it is gratifying to note that there is great improvement in finalising pensions. Almost all arrears are wiped out. With these remarks I support the demands made by the Hon'ble Finance Minister.

† ಶ್ರೀ ಕೆ. ರತ್ನಕುಮಾರಶೆಟ್ಟಿ (ಮೂಡಬಿದ್ರೆ).—ಮಾನ್ಯ ಅಧ್ಯಕ್ಷರೇ ನಮ್ಮ ಸರ್ಕಾರದಿಂದ ನಿವೃತ್ತಿಯಾದಂತಹ ಸರ್ಕಾರಿ ನೌಕರರರಿಗೆ ಸರ್ಕಾರದವರು ಪೆನ್‌ಷನ್ ಕೊಡುವುದರಲ್ಲಿ ಅನುಸರಿಸುವ ನೀತಿಯನ್ನು ನಾವು ಖಂಡನೆ ಮಾಡಬೇಕಾಗಿದೆ. ಕಾರಣ ಈಗ ಸರ್ಕಾರದವರು ಡಿ.ಎ. ಕೊಡುತ್ತಿರುವುದು ಸರ್ಕಾರಿ ಅಧಿಕಾರದಲ್ಲಿರುವ ನೌಕರರಿಗೆ ಮಾತ್ರ ವಿನಾ ರಿಟೈರ್ ಆದ ಸರ್ಕಾರಿ ನೌಕರರಿಗೆ ಏನೂ ಕೊಡುತ್ತಿಲ್ಲ. ಕನ್‌ಸ್ಯೂಮರ್ಸ್ ಗುಡ್ಸ್ ಬೆಲೆ ಏರಿದಮೇಲೆ ಹೆಚ್ಚಿನ ವೇತನ ಮತ್ತು ಡಿ.ಎ. ಅನ್ನು ಬರೀ ಸರ್ಕಾರದ ನೌಕರರಿಗೆ ಮಾತ್ರವಲ್ಲ, ರಿಟೈರ್ ಆದ ಸರ್ಕಾರಿ ನೌಕರರಿಗೂ ಕೊಡಬೇಕು. ಅದರಲ್ಲಿಯೂ ಮುಖ್ಯವಾಗಿ ನಾನ್‌ಗೆಜೆಟೆಡ್ ನೌಕರರು ಯಾರು ಇದ್ದಾರೋ, ಕಡಿಮೆ ಸಂಬಳದ ಮೇಲೆ ಯಾರು ಕೆಲಸ ಮಾಡುತ್ತಿದ್ದು ರಿಟೈರ್ ಆಗಿದ್ದಾರೆಯೋ ಅಂಥಾ ನೌಕರರಿಗೆ ತುಟ್ಟೀ ಭತ್ಯವನ್ನು ಅವರ ಪೆನ್‌ಷನ್ ಜೊತೆಗೆ ಸೇರಿಸಿಕೊಡಬೇಕೆಂದು ನಾನು ತಮ್ಮ ಮೂಲಕ ಒತ್ತಾಯ ಪಡಿಸುತ್ತೇನೆ. ಮಾತ್ರವಲ್ಲ. ಅವರಿಗೆ ಪೆನ್‌ಷನ್ ಕೊಡುವುದು ಸರಿಯಾಗಿ ಪಾವತಿಯಾಗುತ್ತಿಲ್ಲ. ಮುಖ್ಯವಾಗಿ ರಿಟೈರ್ ಆದ ಉಪಾಧ್ಯಾಯರುಗಳಿಗೆ ಸರಿಯಾಗಿ ಪೆನ್‌ಷನ್ ಪಾವತಿಯಾಗುತ್ತಿಲ್ಲ. ಹಲವಾರು ದೂರುಗಳು ಕೇಳಿಬರುತ್ತಿವೆ. ಈಗ ನಾಲ್ಕೈದು ತಿಂಗಳಿಂದ ಸರಿಯಾಗಿ ಅವರಿಗೆ ಪೆನ್‌ಷನ್ ಪಾವತಿಯಾಗುತ್ತಿಲ್ಲ ಎಂದು ತಿಳಿದು ಬಂದಿದೆ. ಅದರಲ್ಲಿಯೂ ರಿಟೈರ್ ಆದ ಎಲಿಮೆಂಟರಿ ಶಾಲೆಯ ಉಪಾಧ್ಯಾಯರುಗಳಿಗೆ ಮೂರು, ನಾಲ್ಕು, ಐದು ರೂಪಾಯಿಗಳ ಪೆನ್‌ಷನ್ ಸಿಕ್ಕುತ್ತಿದೆ. ಆ ಪೆನ್‌ಷನ್ ಅನ್ನು ಅವರು ಪಡೆದುಕೊಳ್ಳಬೇಕಾದರೆ ಆ ರಿಟೈರ್ ಆದ ಉಪಾಧ್ಯಾಯರುಗಳು ತಮ್ಮ ಗ್ರಾಮಗಳಿಂದ ತಾಲ್ಲೂಕು ಹೆಡ್‌ಕ್ವಾರ್ಟರ್ಸ್ ಟ್ರೆಜರಿಗಳಿಗೆ ಅಥವಾ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ ಟ್ರೆಜರಿಗಳಿಗೆ ಹೋಗಿ ಕಾಯಬೇಕಾಗುತ್ತದೆ. ಅವರು ತಮ್ಮ ಗ್ರಾಮಗಳಿಂದ ಡಿಸ್ಟ್ರಿಕ್ ಹೆಡ್‌ಕಾರ್ಟರ್ಸ್ ಅಥವಾ ತಾಲ್ಲೂಕು ಹೆಡ್‌ಕ್ವಾರ್ಟರುಗಳಿಗೆ ಹೋಗಿ ಬರಬೇಕಾದರೆ 5, 10, 15 ರೂಪಾಯಿಗಳನ್ನು ಅವರು ಖರ್ಚುಮಾಡಬೇಕಾಗುತ್ತದೆ. ಅದರೆ ಅವರಿಗೆ ಸಿಕ್ಕತಕ್ಕಂಥ ಪೆನ್‌ಷನ್ ಕೇವಲ ಮೂರು, ನಾಲ್ಕು, ಐದು ರೂಪಾಯಿಗಳು ಮಾತ್ರ. ಪರಿಸ್ಥಿತಿ ಹೀಗಿರುವಾಗ ಸರ್ಕಾರದವರು ಆ ರಿಟೈರ್ಡ್ ಉಪಾಧ್ಯಾಯರುಗಳಿಗೆ ಕೊಡತಕ್ಕ ಪೆನ್‌ಷನ್ ಹಣ ಯಾವ ಪ್ರಯೋಜನಕ್ಕೂ ಬರುವುದಿಲ್ಲ. ಅದು ಅವರಿಗೆ ಊಟಕ್ಕೆ ಮಾತ್ರವಲ್ಲ, ಟಿಫನ್ ಮಾಡುವುದಕ್ಕೂ ಸಾಧ್ಯವಿಲ್ಲ, ಒನ್ ಬೈಟೂ ಕಾಫಿಯನ್ನೂ ಕುಡಿಯುವುದಕ್ಕೆ ಸಾಧ್ಯವಿಲ್ಲ. ಅದರ ಸಲುವಾಗಿ ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಓಲ್ಡ್ ಸ್ಕೀಮ್ ಪ್ರಕಾರ ಏನು ಆ ಉಪಾಧ್ಯಾಯರುಗಳಿಗೆ ಸರ್ಕಾರದವರು ಪೆನ್‌ಷನ್ ಕೊಡುತ್ತಿದ್ದಾರೆಯೋ ಅದನ್ನು ಈಗಿನ ಮಟ್ಟಕ್ಕೆ ಏರಿಸಬೇಕು. ಇದರಿಂದ ಕಡಿಮೆ ಸಂಬಳವನ್ನು ಪಡೆಯತಕ್ಕ, ರಿಟೈರ್ ಆದ ಎಲ್ಲಾ ಸರ್ಕಾರಿ ನೌಕರರಿಗೂ ಪ್ರಯೋಜನ ಆಗುವಂತೆ ಸರ್ಕಾರದವರು ಮಾಡಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಮಾನ್ಯ ಸದಸ್ಯರಾದ ಶ್ರೀಮಾನ್ ಸಿದ್ದವೀರಪ್ಪನವರು ಹೇಳಿದಹಾಗೆ ನಮ್ಮ ದೇಶದ ಘಟನಾವಳಿಯನ್ನು ರಚಿಸಿದ ಡಾ॥ ಅಂಬೇಡ್ಕರ್ ಅವರ ಫೋಟೋವನ್ನು ಈ ಸಭಾ ಭವನದಲ್ಲಿ ಅನಾವರಣ ಮಾಡಬೇಕು. ಅಂಥಾ ಪ್ರಮುಖ ಮಹಾ ವ್ಯಕ್ತಿಯ ಫೋಟೋವನ್ನು ಇಲ್ಲಿ ಇಡುವುದು ಸರ್ವಸಮ್ಮತವಾದದ್ದು ಎಂದು ನಾನು ಹೇಳುತ್ತೇನೆ. ಅವರು ರಚನೆ ಮಾಡಿದ ಘಟನೆಗೆ ಮಾನ್ಯತೆ ಕೊಡಲಿಲ್ಲ. ಅಂಬೇಡಕರ್ ಅವರು ರಚನೆ ಮಾಡಿದ ಘಟನೆ ಎಂಬುದು ಮಹಾ ಪುರಾಣಗಳಿಗೆ ಸಮಾನವಾದುದು. ರಾಮಾಯಣ, ಮಹಾಭಾರತ, ಬೈಬಲ್ ಮತ್ತು ಕುರಾನ್‌ಗಳಿಗೆ ಸಮಾನವಾಗಿದೆ ಈ ಘಟನೆ ಎಂಬ

(ಶ್ರೀ ಕೆ. ರತ್ನಕುಮಾರಶೆಟ್ಟಿ)

ಸಾಹಿತ್ಯ. ಮಾನ್ಯ ಅಂಬೇಡಕರರು ಘಟನೆಯ ಮೂಲಕ ಜನಗಳಿಗೆ ಯಾವ ಆಶ್ವಾಸನೆ ಕೊಟ್ಟಿದ್ದಾರೆಯೋ ಅದನ್ನು ಆಡಳಿತ ಪಕ್ಷದವರು ಉಳಿಸಿಕೊಂಡು ಬಂದಿಲ್ಲ. ಘಟನೆಯು ಒಂದೊಂದು ಹಾಳೆಯನ್ನು ಹರಿದು ಬಿಸಾಡಿದ್ದಾರೆ. ಈ ಘಟನೆಗೆ ಈಗಾಗಲೇ 17 ಅಮೆಂಡ್‌ಮೆಂಟ ಗಳಾಗಿವೆ. ಹಿಂದಿನ ರಾಜ ಮಹಾರಾಜರುಗಳಿಗೆ ಕೊಡುತ್ತಿದ್ದ ಪ್ರಿವಿ ಪರ್ಸ್ ನಿಲ್ಲಿಸಬೇಕೆಂದು ಯೋಚನೆ ನಡೆದಿವೆ. ಬ್ರಿಟಿಷ್ ಸಾಮ್ರಾಜ್ಯಶಾಹಿಯು ಬಿಟ್ಟು ಹೋಗುವಾಗ ಇವರು ವಾಲಂಟರಿಯಾಗಿ ತಮ್ಮ ರೈಟ್ಸ್‌ನ್ನು ಭಾರತ ಯೂನಿಯನ್ ಜೊತೆಗೆ ಸೇರಿಸಿ ಕೊಟ್ಟಿದ್ದಾರೆ. ಘಟನೆಯಲ್ಲಿ ಆಶ್ವಾಸನೆ ಕೊಟ್ಟ ಮೂಲಕ ಇವರು ಬಿಟ್ಟು ಕೊಟ್ಟಿದ್ದಾರೆ. ಇದಲ್ಲದೆ ರಾಜ ಧನವನ್ನು ರೈಲ್ವೇ ಡಿಪಾರ್ಟ್‌ಮೆಂಟನ್ನೂ ಕೂಡ ತಮ್ಮ ಕಡೆ ಇದ್ದುದನ್ನು ವಾಲಂಟರಿಯಾಗಿ ಬಿಟ್ಟು ಕೊಟ್ಟಿದ್ದಾರೆ. ಮೊದಲು ಮಹಾರಾಜರಿಗೆ ಆಶ್ವಾಸನೆ ಕೊಟ್ಟು ವಿಶ್ವಾಸ ತೋರಿಸಿ ಈಗ ವಿಶ್ವಾಸ ಘಾತ ಮಾಡಬಾರದು. ಈ ಹಣ ಹೆಚ್ಚು ಕಡಿಮೆ ಎರಡೂವರೆ ಕೋಟಿಯಷ್ಟು ಸಹ ಪಾವತಿಯಾಗಲಿಕ್ಕಿಲ್ಲ. ಇದನ್ನು ವಾಲಂಟರಿಯಾಗಿ ಬಿಟ್ಟು ಕೊಟ್ಟಿದ್ದಾರೆ. ಘಟನೆಯ ಮೂಲಕ ತೋರಿಸಿದ ವಿಶ್ವಾಸಕ್ಕೆ ವಿಶ್ವಾಸ ಘಾತ ಮಾಡಬಾರದು. ಈ ಮಾತನ್ನು ಹೇಳಿ ನನ್ನ ಎರಡು ಮಾತು ಮುಗಿಸುತ್ತೇನೆ.

† ಶ್ರೀ ಹಂಜಿ ಶಿವಣ್ಣ (ತರೀಕೆರೆ).—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ಮಾನ್ಯ ಅರ್ಥ ಸಚಿವರಾದ ರಾಮಕೃಷ್ಣ ಹೆಗಡೆಯವರು ಮಂಡಿಸಿದ ಬಜೆಟ್ಟನ್ನು ವಿರೋಧಿಸಿ ಕೆಲವು ವಿಷಯ ಮಾತನಾಡುತ್ತೇನೆ. ಈ ಬಜೆಟ್ ಮೂಲಕ ಅವರು ಏನು ಹಣವನ್ನು ಮಂಜೂರು ಮಾಡಿಸಿ ಕೊಳ್ಳುತ್ತಾರೋ ಅದು ದೇಶದ ಉಪಯೋಗಕ್ಕೆ ಅರ್ಧದಷ್ಟು ಖರ್ಚಾಗುತ್ತದೆ, ಉಳಿದ ಅರ್ಧದಷ್ಟು ಹಣ ಪೋಲಾಗುತ್ತದೆ. ದಕ್ಷತೆ ಇಲ್ಲದ ಆಡಳಿತ ಇರತಕ್ಕಂಥಾದ್ದು ಇದಕ್ಕೆ ಕಾರಣ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದಕ್ಕೆ ಕೆಲವು ವಿವರ ಕೊಡುತ್ತೇನೆ. ಇಂದು ದೇಶದಲ್ಲಿ ಎಲ್ಲಾ ತರಹದ ಟ್ಯಾಕ್ಸ್ ರೈತರು ಕೊಡುತ್ತಾರೆ, ರೈತರ ಬಗ್ಗೆ ಅನುಕಂಪ ತೋರಿಸುವ ಮನೋಭಾವನೆ ಈ ಸಭೆಯಲ್ಲಿ ಎಲ್ಲ ಸದಸ್ಯರೂ ಹೊಂದಿದ್ದಾರೆ. ಆಡಳಿತ ಪಕ್ಷದವರಿರಲಿ ವಿರೋಧ ಪಕ್ಷದ ಸದಸ್ಯರಾಗಿರಲಿ ರೈತರ ಬಗ್ಗೆ ಅನುಕಂಪ ತೋರಿಸಿ ಮಾತನಾಡುತ್ತಾರೆ. ಆದರೆ ಹೊರಗಡೆ ಕಾರ್ಯಗತವಾದುದನ್ನು ನೋಡಿದರೆ, ರೈತನಿಗೆ ಅನುಕೂಲವಾಗಿದೆಯೋ ಇಲ್ಲವೇ ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಇಲ್ಲಿಯ 216 ಜನ ಸದಸ್ಯರು ಸೇರಿಕೊಂಡು ರೈತನ ಕಷ್ಟ ಪರಿಹರಿಸಲು ಸಾಧ್ಯವಿಲ್ಲ. ಯಾವದೇ ಕ್ಷೇತ್ರದಲ್ಲಾಗಲಿ ಪ್ರತಿಯೊಬ್ಬ ರೈತನ ಕೆಲಸವನ್ನು ಸುಲಲಿತವಾಗಿ ಆಗುವಂತೆ ಮಾಡಿಕೊಡಬೇಕಾದುದು ಸರಕಾರದ ಕರ್ತವ್ಯ. ರೈತ ಹೋಗಿ ಏನಾದರೂ ಕೇಳಿದರೆ ಸರಿಯಾಗಿ ಉತ್ತರ ಹೇಳತಕ್ಕಂಥ ಅಧಿಕಾರಿಗಳನ್ನು ನೇಮಿಸಿ ಕೊಟ್ಟರೆ ಸಾಕು. ಸರಕಾರ ನೇಮಿಸತಕ್ಕಂಥ ಅಧಿಕಾರಿಗಳು ರೈತನಿಗೆ ಕಿರುಕುಳ ಕೊಡುವುದಕ್ಕೆ ಇದ್ದಾರೆಂದು ಕಾಣುತ್ತದೆ. ಜನರ ಕಷ್ಟನಷ್ಟವನ್ನು ತಿಳಿದುಕೊಂಡು ಅದನ್ನು ತಪ್ಪಿಸದಿದ್ದರೆ ಪ್ರಜಾಪ್ರಭುತ್ವ ಉಳಿಯಲಾರದು. ಜನ ಒಳ್ಳೆಯವರು. ಸರಕಾರಕ್ಕೆ ಮನವಿ ಕೊಡುವುದಕ್ಕೆ ಹೋಗುತ್ತಾರೆ. ಆದರೆ ಅವರ ಕಷ್ಟ ಸುಖ ತಿಳಿದುಕೊಳ್ಳುವುದಿಲ್ಲ. ಇದಲ್ಲದೆ ಸರಕಾರದ ಮನೋಭಾವನೆ ಯಾವ ರೀತಿ ಇದೆ ಎಂಬುದನ್ನು ಸಹ ಹೇಳುತ್ತೇನೆ. ಎಲೆಕ್ಷನ್ ಮುಂಚೆ ಕಂದಾಯ ರದ್ದುಪಡಿಸುತ್ತೇವೆಂದು ಸರಕಾರ ಹೇಳಿತ್ತು. ಆದರೆ ಈಚೆಗೆ ಹೇಳಿರುವುದನ್ನು ನೋಡಿದರೆ, ಮೊನ್ನೆ ಕಂದಾಯ ಮಂತ್ರಿಗಳು ಹೇಳಿದ ಹಾಗೆ ಕಳೆದ ವರ್ಷದ್ದು ಈ ವರ್ಷದ್ದು ಕಂದಾಯ ವಸೂಲ್ಮಾಡುತ್ತೇವೆಂದು ಹೇಳುತ್ತಾರೆ. ಹೊಸದಾಗಿ ಕಂದಾಯ ಹಾಕಿರತಕ್ಕಂಥಾದ್ದು ಒಂದೊಂದು ಸ್ಥಳದಲ್ಲಿ ಒಂದೊಂದು ರೀತಿಯಿಂದ ಇದೆ. ಕೆಲವು ಕಡೆ ನಾಲ್ಕೈದು ಪಟ್ಟು ಇದ್ದರೆ ಕೆಲವು ಕಡೆ ಎಂಟೊಂಭತ್ತು ಪಟ್ಟು ಬೆಳೆಸಿರತಕ್ಕಂಥ ನಿದರ್ಶನಗಳು ಇವೆ. ಮಳೆ ಹೋದ ಕಾಲದಲ್ಲಿ ರೈತನ ಕಷ್ಟ ಪರಿಶೀಲಿಸಲು ಸರಕಾರಕ್ಕೆ ಐದು ವರ್ಷ ಬೇಕಾಯಿತು. ತಮಗೆ ಅದು ಗೊತ್ತಿಲ್ಲ. ಯಾಕೆಂದರೆ ತಾವು ಸುಖವಾಗಿ ಬೆಳೆದಿದ್ದೀರಿ. ರೈತನ ಕಷ್ಟ ಜಾಸ್ತಿಯಾಗಿದೆ. ಹೊಟ್ಟೆಗೆ ಅನ್ನವಿಲ್ಲ ಮಕ್ಕಳಿಗೆ ಅನ್ನ ಬಟ್ಟೆಯಿಲ್ಲ. ಇಂತಹ ಸಂದರ್ಭದಲ್ಲಿ ಹಿಂದಿನ ವರ್ಷದ ಬಾಕಿ ಕಂದಾಯ ಸಹ ವಸೂಲ್ಮಾಡುತ್ತೇವೆಂದು ಹೇಳಿದರು. ಈ ರೀತಿ ಕಂದಾಯ ವಸೂಲ್ಮಾಡುವುದಾದರೆ ಹೊಸದಾಗಿ ಅವರಿಗೋಸ್ಕರ ಜೈಲು ಕಟ್ಟಬೇಕಾಗುತ್ತದೆಂದು ಹೇಳುತ್ತೇನೆ. ಸರಕಾರ ಎಷ್ಟರಮಟ್ಟಿಗೆ ಆಡಳಿತ ನಡೆಸಿಕೊಂಡು ಹೋಗುತ್ತಿದೆ ಎಂಬುದನ್ನು ಹೇಳುತ್ತೇನೆ. ಕಾನೂನಿನಲ್ಲಿ ಒಂದು ರೀತಿ ಇದ್ದರೆ ಕಾರ್ಯಗತ ವಾಗುವುದು ಇನ್ನೊಂದು ರೀತಿ. ಕಾನೂನಿನಲ್ಲಿ ಇಂಥಿಂಥ ರೈತರಿಗೆ ಜಮೀನು ಕೊಡಬೇಕು ಎಂದು ಇದ್ದರೂ ಕೂಡ ಅಧಿಕಾರಿಗಳು ತಾವೇ ಜಮೀನು ಹಂಚಿಕೊಂಡು ಮಾರುತ್ತಾರೆ. ನನ್ನ ಜೊತೆಗೆ ಬಂದರೆ ಇದನ್ನು ತೋರಿಸುತ್ತೇನೆ. ಇದು ನಿಜವಲ್ಲವಾದರೆ ನಾನು ನನ್ನ ಸದಸ್ಯತ್ವಕ್ಕೆ ರಾಜೀನಾಮೆ ಕೊಡುತ್ತೇನೆ ಇಲ್ಲವೆ ನೀವು ವಿಧಿಸುವ ಶಿಕ್ಷೆಗೆ ಗುರಿಯಾಗುತ್ತೇನೆ. ಒಬ್ಬ ನಟ

ಡಿವಿಜನಲ್ ಆಫೀಸರು 16 ಎಕರೆ ನೀರಾವರಿ ಜಮೀನು ಮಾಡುತ್ತಿದ್ದರು. ಅಂಥವರನ್ನು ಸರಕಾರ ಹಾಗೇ ಇಟ್ಟುಕೊಂಡಿದೆ. ಈಗ ಆ ಜಮೀನು ನೂರಿನ್ನೂರು ಎಕರೆಯಾಗಿವೆ. ಆ ಅಧಿಕಾರಿಗಳಿಗೆ ಸರಕಾರದ ಹೆದರಿಕೆ ಇಲ್ಲದೆ ನಿರ್ಭಯರಾಗಿದ್ದಾರೆ. ಆದರೆ ಯಾರಾದರೂ ಒಬ್ಬ ಬಡ ರೈತನು ಕಂದಾಯ ಕೊಡದೇ ಇದ್ದರೆ ಅಂಥವನ ಮನೆ ಜಪ್ತಿ ಮಾಡುತ್ತಾರೆ. ಬಡ ರೈತರ ಬಗ್ಗೆ ಅನುಕಂಪ ತೋರಿಸುವುದಿಲ್ಲ. ಇದರಿಂದ ಫಲಿತವಾಗಿ ನೆಮ್ಮದಿಯಿಂದ ಬಾಳತಕ್ಕಂಥ ಅವಕಾಶ ಬಡ ರೈತರಿಗೆ ತಪ್ಪಿ ಹೋಗಿವೆ. ಹಾಗೆಯೇ ಮುಂದೆ ಅವರ ಮಕ್ಕಳು ಮರಿ ಜೀವನ ಮಾಡುವುದಕ್ಕೆ ಭೀತಿ ಉಂಟುಮಾಡಿವೆ. ಸರಕಾರ ಅನೇಕ ಯೋಜನೆಗಳನ್ನು ಹಾಕಿಕೊಂಡಿವೆ, ಆದರೆ ಕೆಲಸಗಳ ಬಗ್ಗೆ ವಿಚಾರ ಮಾಡಿದರೆ ಏನೇನೋ ನಡೆಯುತ್ತಿದೆ. ಸರಕಾರದ ಕೆಲಸವನ್ನು ಹೊಗಳಲಾಗುತ್ತಿದೆ. ಆದರೆ ಬಡ ರೈತರು ಆಫೀಸಿಗೆ ಹೋದರೆ ಕೇಳತಕ್ಕಂಥವರು ಇಲ್ಲ. ಒಂದು ಕೆಲಸವಾಗಬೇಕಾದರೆ ಆಫೀಸಿಗೆ ಐದು ವರ್ಷ ಓಡಾಡಬೇಕಾಗುತ್ತದೆ. ಇಂಥ ಆಫೀಸು ಹಾಗು ಅಧಿಕಾರಿಗಳನ್ನು ಏತಕ್ಕೆ ಇಟ್ಟುಕೊಂಡಿದ್ದಾರೆಯೋ? ಇದನ್ನು ಬಹಳ ವ್ಯಥೆಯಿಂದ ಹೇಳಬೇಕಾಗಿದೆ. ಜನಗಳು ಕಷ್ಟದಿಂದ ಸಾಯುತ್ತಿದ್ದಾರೆ. ಇಂಥ ನೀತಿಯನ್ನು ಸರಕಾರ ಬದಲಾವಣೆ ಮಾಡದಿದ್ದರೆ ಜನಗಳ ಮನಸ್ಸಿನಲ್ಲಿ ಸರಕಾರದ ಬಗ್ಗೆ ಇನ್ನೂ ಕೆಟ್ಟ ಮನೋಭಾವನೆಯನ್ನುಂಟು ಮಾಡುತ್ತದೆ.

ಇನ್ನು ಪಾನನಿರೋಧದ ಬಗ್ಗೆ ಒಂದು ಮಾತು ಹೇಳುತ್ತೇನೆ. ಕಳ್ಳ ಭಟ್ಟಿ ಸಾರಾಯಿ ತಯಾರ್ಮಾಡುವುದು ಎಲ್ಲ ಕಡೆ ನಡೆಯುತ್ತಿದೆ. ಇದನ್ನು ತಯಾರ್ಮಾಡುವುದಕ್ಕೆ ಶ್ರೀಗಂಧದ ಮರ ಕಡಿದು ಉಪಯೋಗಿಸುವುದರಿಂದ ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಮರ ಕಡಿದು ಸುಡುತ್ತಿದ್ದಾರೆ. ಈ ಕಳ್ಳ ಭಟ್ಟಿ ಸಾರಾಯಿಯಿಂದ ದೇಶದಲ್ಲಿ ಅನಾಹುತ ನಡೆಯುತ್ತಿದೆ. ಆದುದರಿಂದ ಪಾನನಿರೋಧವನ್ನು ತೆಗೆದುಹಾಕಬೇಕು. ನಾವು ಹಳ್ಳಿಗಳಿಗೆ ಹೋಗಿ ನೋಡಿದರೆ ಗೊತ್ತಾಗುತ್ತದೆ. ಈಚಲ ಮರಗಳಿಗೆ ಮಡಕೆ ಕಟ್ಟಿ ಹೆಂಡ ತೆಗೆಯುತ್ತಾರೆ. ಅಲ್ಲಲ್ಲಿ ಹೆಂಡದ ಅಂಗಡಿಗಳು ಹಾಗೇ ಇವೆ. ಭದ್ರಾವತಿ ತಾಲ್ಲೂಕಿನಲ್ಲಿ 60 ಹೆಂಡದ ಅಂಗಡಿಗಳಿವೆ. ಸರ್ಕಾರ ಇದೆಯೋ ಇಲ್ಲವೋ ಎನ್ನುವ ಸಂದೇಹ ಜನಗಳಿಗೆ ಬರುತ್ತಿದೆ. ಸರ್ಕಾರವೇ ಇಲ್ಲ ಎನ್ನುವ ಭಾವನೆಯನ್ನು ಜನ ತಾಳಬೇಕೇ ಎಂದು ಕೇಳಬೇಕಾಗಿದೆ. ನೀವೇ ಆಗಿ, ನಿಮ್ಮನ್ನು ವಿರೋಧಿಸಬೇಕೆಂದು ಮಾತನಾಡುತ್ತಿಲ್ಲ, ದೇಶದಲ್ಲಿನ ಗಂಡಾಂತರವನ್ನು ನೋಡಿ ಮಾತನಾಡುತ್ತಿದ್ದೇನೆ. ನ್ಯಾಯವೋ, ಅನ್ಯಾಯವೋ ಎಂಬುದನ್ನು ಪರಾಂಬರಿಸಿ ಎಂದು ಆಳುವ ಪಕ್ಷಕ್ಕೆ ಹೇಳುತ್ತೇನೆ. ನಾನು ಯಾವ ರೀತಿಯಲ್ಲಾದರೂ ಸುಳ್ಳು ಹೇಳುತ್ತಿದ್ದೇನೆಂದರೆ ನಾನು ಬಾಯಿ ಮುಚ್ಚಿಕೊಳ್ಳುತ್ತೇನೆ. ಆಗತಕ್ಕ ಅನಾಹುತಗಳನ್ನು ತಪ್ಪಿಸಿದರೆ ಸಾಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಅಮೆರಿಕಾ ದೇಶದವರು ನಮ್ಮ ದೇಶದ ಮಕ್ಕಳಿಗಾಗಿ ಮುಫತ್ತಾಗಿ ಹಾಲಿನ ಪುಡಿ, ರವೆ ಮತ್ತು ವನಸ್ಪತಿ ಕೊಟ್ಟಿದ್ದಾರೆ. ಇದರಲ್ಲಿ ಒಂದೊಂದು ತಾಲ್ಲೂಕಿನಲ್ಲಿಯೂ ಒಂದೊಂದು ಶಾಲೆಯಲ್ಲಿಯೂ ವರ್ಷ ಒಂದಕ್ಕೆ ನೂರು ರೂಪಾಯಿ ಆದರೂ ದುರುಪಯೋಗವಾಗುತ್ತಿದೆ. ಅದನ್ನೆಲ್ಲಾ ಬೇರೆ ಕಡೆ ಮಾರಿ ಹಣ ಸಂಪಾದನೆ ಮಾಡುತ್ತಿದ್ದಾರೆ. ಇದು ನಿಜವಾದ ಅಂಶ. ಈ ರೀತಿ ಆದರೆ ಮುಂದಿನ ಪೀಳಿಗೆಯ ಗತಿ ಏನು! ಎಲ್ಲಾ ಇಲಾಖೆಗಳಲ್ಲಿಯೂ ಈ ರೀತಿ ಆಡಳಿತದಲ್ಲಿ ಸಡಿಲವಾದರೆ ದೇಶದಲ್ಲಿ ನೀತಿ ಎಲ್ಲಿರುತ್ತದೆ? ಇದರ ಬಗ್ಗೆ ಗಮನ ಕೊಡಬೇಕೆಂದು ಆಡಳಿತ ಪಕ್ಷದವರಿಗೂ ಮತ್ತು ಸರ್ಕಾರಕ್ಕೂ ಸಲಹೆ ಮಾಡುತ್ತೇನೆ. ಆಡಳಿತ ಪಕ್ಷದಲ್ಲಿರುವ ಸದಸ್ಯರಿಗೆ ಸಹ ದೇಶದಲ್ಲಿರುವ ರೈತರ ಕಷ್ಟ ಸುಖ ಗೊತ್ತು. ಮಂತ್ರಿಗಳು ಅವರು ಹೇಳಿದುದನ್ನು ಕೇಳಲೇಬೇಕಾಗುತ್ತದೆ. ಆದ್ದರಿಂದ ರೈತರ ಕಷ್ಟವನ್ನು ಅವರು ಬಗೆಹರಿಸಬೇಕೆಂದು ಹೇಳುತ್ತಿದ್ದೇನೆ. ನಾನು ಮಂತ್ರಿಯಾಗಬೇಕು, ನನ್ನ ಸರ್ಕಾರ ಇರಬೇಕು ಎನ್ನುವ ಒಂದು ದೃಷ್ಟಿಯಿಂದ ದೇಶಕ್ಕೆ ಆಗತಕ್ಕ ಅನಾಹುತಗಳು ಹೆಚ್ಚಾಗಿವೆ ಎಂದು ಈ ಸಮಯದಲ್ಲಿ ತಿಳಿಸುತ್ತೇನೆ. ನಾವು ಇದ್ದರೆ ಸಾಕು, ದೇಶ ಏನಾದರೂ ಆಗಲಿ ಎನ್ನುವ ಮನೋಭಾವ ಜನರಲ್ಲಿದೆ. ಇದು ತಪ್ಪಬೇಕು. ಇನ್ನು ಮುಂದೆ ನಿಮ್ಮವರೇ ಆಗಿರಲಿ ಅನ್ಯರೇ ಆಗಿರಲಿ ಒಂದೇ ಒಂದು ರೀತಿಯಿಂದ ಆಡಳಿತ ನಡೆಸಬೇಕು ಎಂದು, ಈ ಮೂಲಕ ಸರ್ಕಾರಕ್ಕೆ ನಿವೇದಿಸಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ. ಮುನಿಯಪ್ಪ (ಬಾಗೇಪಲ್ಲಿ).—ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ನಮ್ಮ ಹಣಕಾಸಿನ ಸಚಿವರು ತಂದಿರತಕ್ಕ ಈ ಬೇಡಿಕೆಯನ್ನು ಸ್ವಾಗತಿಸುತ್ತ ಕೆಲವಾರು ವಿಚಾರಗಳನ್ನು ಈ ಸಭೆಯ ಗಮನಕ್ಕೆ ತರುತ್ತೇನೆ. ದಕ್ಷರಾದ ಹಣಕಾಸಿನ ಸಚಿವರು ಮತ್ತು ಕಮೀಷನರು ಸರ್ಕಾರಕ್ಕೆ ಬರಬೇಕಾದ ತೆರಿಗೆಗಳನ್ನು ವಸೂಲ್ಮಾಡುತ್ತಿದ್ದಾರೆ ಎಂದು ಹೆಮ್ಮೆಯಿಂದ ಹೇಳುತ್ತೇನೆ. ಮೊನ್ನೆ ಶ್ರೀ ಚಿಕ್ಕೇಗೌಡರು ಒಂದು ಪ್ರಶ್ನೆ ಹಾಕಿ ಎಕ್ಸೈಜ್ ಬಾಬಿನಲ್ಲಿ ಎಷ್ಟು ಬಾಕಿ ಇದೆ ಎಂದು ಸರ್ಕಾರವನ್ನು ಕೇಳಿದರು. ಹಳೇ ಮೈಸೂರಿನ ಎಲ್ಲಾ ತಾಲ್ಲೂಕುಗಳ ಬಗ್ಗೆ ಪಟ್ಟಿಯನ್ನು ಕೊಟ್ಟು

(ಶ್ರೀ ವಿ. ಮುನಿಯಪ್ಪ)

ದಕ್ಷಿಣ ಕನ್ನಡ ಜಿಲ್ಲೆ ಬೊಂಬಾಯಿ ಕರ್ಣಾಟಕ, ಹೈದರಾಬಾದು ಕರ್ನಾಟಕ ಈ ಪ್ರದೇಶಗಳಲ್ಲಿ ಇನ್ನೂ ಅಂಕಿ ಅಂಶಗಳು ಸಿಕ್ಕಿಲ್ಲ ಎಂದು ಅದಕ್ಕೆ ಉತ್ತರ ಬಂದಿದೆ. ಹಿಂದೆ ಮಾನ್ಯ ಜತ್ತಿಯವರು ಮುಖ್ಯ ಮಂತ್ರಿಗಳಾಗಿದ್ದಾಗ ಇದೇ ಪ್ರಶ್ನೆ ಬಂದಾಗ ಏಕೆ ಹೀಗೆ ಮಾಡಿದ್ದೀರಿ ಎಂದರೆ, ಏನ್ರಿ ಹಿಂದೆ ನಿಜಾಮರ ಕಾಲದಲ್ಲಿ ಸಾಲ್ವೆನ್ಸಿ ಕೊಡುವಾಗ ಕಂಟ್ರಾಕ್ಟುದಾರರು ಮಸೀದಿಗಳು, ಮಠಗಳು, ದೇವಸ್ಥಾನಗಳು ಇವನ್ನು ಕೊಟ್ಟಿದ್ದಾರೆ. ಅದ್ದರಿಂದ ಬಾಕಿ ಇರುವ ಹಣವನ್ನು ವಸೂಲ್ಮಾಡುವುದಕ್ಕೆ ಬಹಳ ತೊಂದರೆಯಾಗಿದೆ ಎಂದು ಹೇಳಿದರು. ಇಂಥ ಸನ್ನಿವೇಶದಲ್ಲಿ ನಮ್ಮ ಕಮೀಷನರವರು ಬಹಳ ಕಷ್ಟಪಟ್ಟು, ಆ ಕಡೆ ಹರಾಜು ಮಾಡಿಕೊಂಡು ಬಂದಿದ್ದಾರೆ. ಇದರಲ್ಲಿ ಸಾಲ್ವೆನ್ಸಿ ಹೆಚ್ಚಲು ಬಹಳ ಕಟ್ಟುನಿಟ್ಟಾದ ವ್ಯವಸ್ಥೆ ಮಾಡುತ್ತಾರೆ ಎಂದು ನಾನು ನಂಬಿಕೊಂಡಿದ್ದೇನೆ ಸ್ವಾಮಿ.

ಒಂದು ಕಡೆ ಉಳಿತಾಯ ಮಾಡುವುದು, ಇನ್ನೊಂದು ಕಡೆ ಕೋಟಿಗಟ್ಟಲೆ ರೈತರ ದುಡ್ಡು ಲಿಕೇಜ್ ಆಗುತ್ತಿರುವುದು ಖಂಡಿತವಾಗಿಯೂ ಒಳ್ಳೆಯದಲ್ಲ. ಇದರಿಂದ ದೇಶಕ್ಕೆ ಕ್ಷೇಮವಿಲ್ಲ. ಮಾನ್ಯ ಅಧ್ಯಕ್ಷರಲ್ಲಿ ಒಂದು ವಿನಂತಿ ಮಾಡಿಕೊಳ್ಳಬೇಕಾಗಿದೆ. ಸರ್ಕಾರದವರು ರೈತರ ದುಡ್ಡನ್ನು ಸರಿಯಾಗಿ ಖರ್ಚು ಮಾಡುವುದು, ಸರ್ಕಾರಕ್ಕೆ ಬರಬೇಕಾದ್ದನ್ನು ಸರಿಯಾಗಿ ವಸೂಲ್ಮಾಡುವುದಕ್ಕೆ ತಕ್ಕ ವ್ಯವಸ್ಥೆ ಮಾಡುವಂತೆ ಸರ್ಕಾರಕ್ಕೆ ತಿಳಿಸಬೇಕೆಂದು ಅರಿಕೆ ಮಾಡುತ್ತೇನೆ. ಉಳಿತಾಯ ಮಾಡುವ ವಿಚಾರದಲ್ಲಿ ನನಗೆ ಈ ಸಂದರ್ಭದಲ್ಲಿ ಜ್ಞಾಪಕ ಬರುವ ಒಂದು ಕಥೆಯನ್ನು ಹೇಳಿದರೆ ಚೆನ್ನಾಗಿ ಅರ್ಥವಾಗುತ್ತದೆಂದು ತಿಳಿದುಕೊಂಡಿದ್ದೇನೆ. ಒಂದು ಊರಿನಲ್ಲಿ ಒಬ್ಬ ಗೆಜೆಟೆಡ್ ಅಧಿಕಾರಿ ಇದ್ದರಂತೆ. ಅವರು ಸಾವಿರ ರೂಪಾಯಿ ಸಂಬಳ ತೆಗೆದುಕೊಳ್ಳುತ್ತಿದ್ದರು. ಅದಕ್ಕೆ ತಕ್ಕ ಹಾಗೆ ಸಂಸಾರವನ್ನು ನಡೆಸಿಕೊಂಡು ಹೋಗುತ್ತಿದ್ದರು. ಅವರಿಗೆ ರಿಟೈರಾಯಿತು. ರಿಟೈರಾದಾಗ ಅಡಿಗೆಯವನನ್ನು ಕರೆದು ನನಗೆ ರಿಟೈರಾಯಿತು. ಇನ್ನು ಮೇಲೆ ನನಗೆ 500 ರೂಪಾಯಿ ಪೆನ್ಷನ್ ಬರುತ್ತದೆ. ಆದ್ದರಿಂದ ಇನ್ನು ಮುಂದೆ ಅರ್ಧ ಅಕ್ಕಿ ಹಾಕು, ಅರ್ಧ ತರಕಾರಿ ಹಾಕು, ಅರ್ಧ ತುಪ್ಪ ಹಾಕು, ಸಂಸಾರದಲ್ಲಿ ಉಪಯೋಗಿಸುವ ಎಲ್ಲಾ ಪದಾರ್ಥಗಳನ್ನೂ ಅರ್ಧ ಅರ್ಧ ಹಾಕು, ಈ ರೀತಿ ಅಡಿಗೆ ಮಾಡು ಎಂದು ಹೇಳಿದರಂತೆ. ಅಡಿಗೆಯವನು ಅದೇ ಪ್ರಕಾರ ಸಾಹೇಬರು ಬಂದ ತಕ್ಷಣ ಎಲ್ಲವನ್ನೂ ಅರ್ಧ ಹಾಕಿಕೊಂಡು ಬಂದ. ಆ ಅಧಿಕಾರಿ ಊಟ ಮಾಡಿದ ಮೇಲೆ ಅಡಿಗೆಯವನು ಊಟಕ್ಕೆ ಕುಳಿತ. ಸಾಹೇಬರು ಅಲ್ಲೇ ಕುಳಿತ್ತಿದ್ದರು. ಅಡಿಗೆಯವನು ಭರ್ಜರಿಯಾಗಿ ಎಲ್ಲಾ ಹಾಕಿಕೊಂಡು ಊಟ ಮಾಡುವುದಕ್ಕೆ ಕುಳಿತ. ಆಗ ಅಧಿಕಾರಿಯು ಏನಯ್ಯಾ ನನಗೆ ರಿಟೈರಾಯಿತು, ನಾನು ಅರ್ಧ ತಿನ್ನುತ್ತಿದ್ದೇನೆ. ನೀನು ಪೂರ್ತಾ ಊಟ ಹೊಡೆಯುತ್ತಿದ್ದೀಯೋ ಎಂದು ಕೇಳಿದರು. ಅದಕ್ಕೆ ಅಡಿಗೆಯವನು ಸ್ವಾಮೀ, ರಿಟೈರಾಗಿರುವುದು ನಿಮಗೆ, ನನಗಲ್ಲ ಎಂದು ಹೇಳಿದ. ಆದುದರಿಂದ ಉಳಿತಾಯ ಮಾಡುವುದರಲ್ಲಿ ಬಹಳ ಎಚ್ಚರಿಕೆಯಿಂದ ಇರಬೇಕು. ಒಂದು ಕಡೆ ಹೆಚ್ಚಾಗಿ ವಸೂಲ್ಮಾಡುತ್ತ ಇನ್ನೊಂದು ಕಡೆ ಸೋರಿ ಹೋಗುತ್ತಿರುವುದು ಸರಿಯಲ್ಲ. ಇದರ ಕಡೆಗೆ ಹೆಚ್ಚು ಗಮನ ಕೊಡಬೇಕು. ನಮ್ಮ ಕಮೀಷನರ್ ಸಾಹೇಬರು ಅಂಕಿ ಅಂಶಗಳು ಸಿಕ್ಕದೆ ಇರತಕ್ಕ ಬೊಂಬಾಯಿ ಕರ್ಣಾಟಕ, ಹೈದರಾಬಾದ್ ಕರ್ಣಾಟಕ, ದಕ್ಷಿಣ ಕನ್ನಡ ಜಿಲ್ಲೆ, ಕೊಡಗು ಇವುಗಳಲ್ಲಿ ಪತ್ತೆ ಮಾಡಿ ಆ ದುಡ್ಡನ್ನೂ ವಸೂಲ್ಮಾಡಬೇಕೆಂದು ಈ ಮೂಲಕ ಸರ್ಕಾರಕ್ಕೆ ಸಲಹೆ ಮಾಡುತ್ತಿದ್ದೇನೆ.

ಪಾನ ನಿರೋಧದ ವಿಚಾರದಲ್ಲಿ ಹೇಳಬೇಕಾದರೆ, ಎಲ್ಲರೂ ಸತ್ಪ್ರಜೆಗಳಾಗಲಿ ಎನ್ನುವ ಉದ್ದೇಶದಿಂದ ಪಾನ ನಿರೋಧವನ್ನು ಜಾರಿಗೆ ತಂದರು. ಪಾನ ನಿರೋಧವು ಜಾರಿಗೆ ಬಂದ ಮೊದಲನೆ ಜಿಲ್ಲೆ ಎಂದರೆ ಕೋಲಾರ ಜಿಲ್ಲೆ. ಆಗಿನಿಂದ ನಾನು ನೋಡುತ್ತಿದ್ದೇನೆ, ಖಂಡಿತವಾಗಿಯೂ ಗ್ರಾಮಾಂತರ ಪ್ರದೇಶದಲ್ಲಿ ಕುಡಿಯುವವರ ಸಂಖ್ಯೆ ಜಾಸ್ತಿಯಾಯಿತು. ಪಾನನಿರೋಧದ ನೀತಿಯನ್ನು ಸಡಿಲ ಮಾಡುತ್ತೇವೆ, ಅದನ್ನು ರದ್ದು ಮಾಡುತ್ತೇವೆ ಎಂದು ಹೇಳಿದಾಗ ಪಾಪ, ಕೆಲವು ಜನ ಪೋಲೀಸಿನವರೂ ಮತ್ತು ಹಳ್ಳಿಗಾಡಿನಲ್ಲಿರುವ ಪ್ರಭಾವಶಾಲಿಗಳೂ ಶೋಕ ದಿನವನ್ನು ಆಚರಣೆ ಮಾಡುತ್ತಾರೆಯೋ ಏನೋ ; ಈಗ ಅಂಥವರಿಗೆಲ್ಲಾ ಬಹಳ ಅನುಕೂಲವಾಗುತ್ತಿವೆ. ಇಂಥ ಸನ್ನಿವೇಶದಲ್ಲಿ ಪಾನನಿರೋಧವನ್ನು ಒಂದು ತತ್ವದ ದೃಷ್ಟಿಯಿಂದ ನೋಡಬಾರದು. ಒಂದು ದಾರಿಯಲ್ಲಿ ಹೋಗುವಾಗ ಅದರಲ್ಲಿ ಬರುವ ಎಡರು ತೊಡರುಗಳನ್ನು ಸರಿಮಾಡಿಕೊಳ್ಳಬೇಕು. ಈ ಪಾನನಿರೋಧ ಜಾರಿಗೆ ಬರಬೇಕೆಂದು ಮಹಾತ್ಮ ಗಾಂಧಿಯವರು ಹೇಳಿದರು. ಅವರು 12 ಬಾಬುಗಳನ್ನು ಹೇಳಿದ್ದಾರೆ. ಆ ಹನ್ನೆರಡು ಬಾಬುಗಳೂ ಈಗ ಯಶಸ್ವಿಯಾಗಿವೆಯೋ ಇಲ್ಲವೇ ಎನ್ನುವುದನ್ನು ನೋಡಬೇಕು. ಇನ್ನು ಒಂದೇ ಒಂದು ವಿಷಯವನ್ನು ಹೇಳಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

6-00 P.M.

ಪಾನನಿರೋಧ ಜಾರಿಗೆ ಬಂದ ಮೇಲೆ ಚನ್ನಬಸಪ್ಪನವರು ಗೃಹ ಸಚಿವರಾಗಿದ್ದರು, ಅವರು ಪಾನ ನಿರೋಧ ಯಶಸ್ವಿಯಾಗುವಂತೆ ಮಾಡಲು ಹಠತೊಟ್ಟರು. ಅದರಂತೆ ಹುಬ್ಬಳ್ಳಿಗೆ ಹೋದರು ಅಲ್ಲಿ ದಾಳಿಮಾಡಿದರು, ಮಾಡಿದ ಮೇಲೆ ಒಂದು ವಾರ ಹುಬ್ಬಳ್ಳಿಯಲ್ಲಿ ಒಂದು ತೊಟ್ಟು ಕಳ್ಳಬಟ್ಟಿ ಸಾರಾಯಿ ಸಿಕ್ಕಲಿಲ್ಲ. ಆಮೇಲೆ ಒಂದು ವಾರ ಹುಬ್ಬಳ್ಳಿ ಪ್ರದೇಶದಲ್ಲಿ ಭಟ್ಟಿಸಾರಾಯಿ ಇಲ್ಲದಂತೆ ಮಾಡಿ ಬೆಂಗಳೂರಿಗೆ ಬಂದರು. ಬಂದ ತಕ್ಷಣ ಒಂದು ವಾರ ಹುಬ್ಬಳ್ಳಿ ಪ್ರದೇಶದಲ್ಲಿ ಭಟ್ಟಿ ಸಾರಾಯಿ ಇಲ್ಲದಂತೆ ಮಾಡುವುದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಒಂದೂವರೆ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆಂದು ಗೊತ್ತಾಯಿತು ಅಲ್ಲಿಗೇ ಒಂದೂವರೆ ಲಕ್ಷ ಖರ್ಚು ಮಾಡಿದರೆ ದೇಶ ದಲ್ಲಿ ಪಾನನಿರೋಧವಿರುವ ಕಡೆಯಲ್ಲೆಲ್ಲಾ ಹಾಗೆ ಮಾಡಲು ಎಷ್ಟು ಲಕ್ಷ ಹಣ ಬೇಕೆಂಬುದನ್ನು ಊಹಿಸಬಹುದು. ಇಷ್ಟು ಹಣವಿದೆಯೇ, ಎಲ್ಲಿಂದ ತರಬೇಕು ಎಂಬುದನ್ನು ಯೋಚನೆ ಮಾಡಬೇಕು. ಕುಡಿತದಿಂದ ಹರಿಜನರು ಕೆಟ್ಟುಹೋಗುತ್ತಾರೆಂದು ಹೇಳುತ್ತಾರೆ. ಆದರೆ ಅವರ ಹೆಸರಿನಲ್ಲಿ ಎಲ್ಲಾ ಜನಾಂಗದವರೂ ಕೆಡುತ್ತಿದ್ದಾರೆ. ಆದುದರಿಂದ ನಿಜವಾಗಿಯೂ ಹೇಳುವುದು ಹರಿಜನರು ಸೋಮಾರಿ ಗಳಾಗಿದ್ದಾರೆ, ಮೊದಲು ಬೆಳಗಿನಿಂದ ಸಾಯಂಕಾಲದವರೆಗೂ ಕೂಲಿ ಮಾಡುತ್ತಿದ್ದರು. ಈಗ ಅವರು ಕೂಲಿ ಮಾಡುವುದಿಲ್ಲ. ಏಕೆಂದರೆ, ಬೆಳಗಿನಿಂದ ಸಾಯಂಕಾಲದವರೆಗೂ ಕೆಲಸ ಮಾಡಬೇಕು. ಈಗ ಹರಿಜನರನ್ನು ಭಟ್ಟಿಸಾರಾಯಿ ಇಳಿಸುವವರು ಬೆಳಗ್ಗೆ 5 ಗಂಟೆಯಿಂದ 9 ಗಂಟೆಯವರೆಗೂ ಕೆಲಸಕ್ಕೆ ತೆಗೆದುಕೊಂಡು 4 ರೂಪಾಯಿ ಕೊಡುತ್ತಾರೆ, ದಿವಸದಲ್ಲಿ ಇಷ್ಟು ಕಾಲ ಅವರು ಕೆಲಸ ಮಾಡುತ್ತಾರೆ. ಇದರಿಂದ ಜಮೀನು ಪಾಳುಬಿದ್ದಿದೆ. ಹೆಚ್ಚು ಆಹಾರ ಬೆಳೆಯಿರಿ ಎಂದು ಹೇಳುತ್ತಿದ್ದಾರೆ. ಆದರೆ ಹರಿಜನರಿಂದ ಈ ಕೆಲಸಕ್ಕೆ ಅನುಕೂಲವಾಗಿದೆಯೆಂದು ಹೇಳಿದರೆ ಅದು ನಿಜವಲ್ಲ. ಕುಡಿಯುವ ಚಟವಿದ್ದವರೆಲ್ಲಾ ಸೋಮಾರಿಗಳಾಗಿದ್ದಾರೆ. ವ್ಯವಸಾಯದಲ್ಲಂತೂ ಅವರಿಗೆ ಉತ್ಸಾಹವಿಲ್ಲ. ಈ ಸನ್ನಿವೇಶದಲ್ಲಿ ಪೋಲೀಸಿನವರು ನಿರಪರಾಧಿಗಳನ್ನು ಅಂದರೆ ಯಾರಾದರೂ ಜಬರ್‌ದಸ್ತಿ ಮಾಡಿದರೆ ಅವರನ್ನು ತೊಂದರೆಗೆ ಗುರಿ ಮಾಡುತ್ತಾರೆ, ಅವರ ಮನೆಯಲ್ಲಿ ಎಲ್ಲಾದರೂ ಒಂದು ಬಾಟಲು ಸಾರಾಯನ್ನಿಟ್ಟು ಅವರ ಮೇಲೆ ಕೇಸು ಹಾಕುತ್ತಾರೆ. ಈ ಕೇಸುಗಳು ಮೈಸೂರು ದೇಶದಲ್ಲಿ ಪಾನನಿರೋಧ ಜಾರಿಗೆ ಬಂದಾಗಿನಿಂದ ಇಲ್ಲಿಯವರೆಗೂ ಹಾಕಲ್ಪಡುತ್ತಿದ್ದು ಧಾಳಿ ಮಾಡುವುದು, ಕೇಸುಗಳನ್ನು ಮ್ಯಾಜಿಸ್ಟ್ರೇಟರ ಕೋರ್ಟುಗಳಿಗೆ ಕೊಡುವುದು, ಕೋರ್ಟಿನಿಂದ ವಾಪಸು ಹೋಗು ವುದು. ಮುಂತಾದ್ದಕ್ಕೆಲ್ಲಾ ಹಣವೆಷ್ಟೋ ಖರ್ಚಾಗಿದೆ. ಇದನ್ನೆಲ್ಲಾ ಗಮನಿಸಬೇಕು. ಪಾನ ನಿರೋಧಕ್ಕೆ ಸಂಬಂಧಪಟ್ಟ ಬಿಲ್ಲು ಮುಂದೆ ಬರುತ್ತದೆ, ಆಗ ನನಗೆ ಮಾತನಾಡಲು ಹೆಚ್ಚು ಕಾಲಾವಕಾಶ ಕೊಡಬೇಕು ಎಂದು ಕೇಳಿಕೊಂಡು ಈಗ ಅಧ್ಯಕ್ಷರ ಆಜ್ಞೆಯನ್ನು ಪಾಲಿಸಿ ಇವತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ನಮಸ್ಕಾರ ಮಾಡುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್ (ಮೂಡಿಗೆರೆ).—ಮಾನ್ಯ ಅಧ್ಯಕ್ಷರೇ, ಸಭೆಯ ಮುಂದಿರುವ ಪ್ರತಿಯೊಂದು ಬೇಡಿಕೆಯನ್ನೂ ವಿರೋಧಿಸುತ್ತಾ ಕೆಲವಾರು ಮಾತುಗಳನ್ನಾಡಲು ಇಚ್ಛೆಪಡುತ್ತೇನೆ. ಮೊದಲನೆಯದಾಗಿ ಎಕ್ಸೈಜು ಬಾಬಿನಲ್ಲಿ ಈ ವರ್ಷದ ಆದಾಯವನ್ನು ನೋಡುವುದಾದರೆ ಹೋದ ವರ್ಷಕ್ಕಿಂತ ಈ ವರ್ಷ ಸುಮಾರು 20 ಲಕ್ಷ ರೂಪಾಯಿಗಳಷ್ಟು ಕಡಮೆ ಅಂದಾಜು ಮಾಡಲಾಗಿದೆ. ಇದಕ್ಕೇನು ಕಾರಣವೆಂಬುದನ್ನು ಸರಕಾರದವರು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲದೆ ಎಕ್ಸೈಜು ಡ್ಯೂಟಿಯಲ್ಲಿ ಕಂಟ್ರಿ ಫರ್ಮೆಂಟೆಡ್ ಲಿಕ್ಕರ್‌ನಿಂದ ಬರುವ ಆದಾಯ 65-66ರಲ್ಲಿ 2ಕೋಟಿ 32 ಲಕ್ಷವಿತ್ತು, 66-67ರಲ್ಲಿ 1ಕೋಟಿ 63 ಲಕ್ಷಕ್ಕೆ ಇಳಿಯಿತು, 66-67ರಲ್ಲಿ ಆದ ರಿವೈಜ್ಡ್ ಎಸ್ಟಿಮೇಟಿನಂತೆ ಅದು 1ಕೋಟಿ 40 ಲಕ್ಷವಾಯಿತು. ಹೀಗೆ ಕಡಮೆಯಾಗಿ 67-68ರಲ್ಲಿ 1ಕೋಟಿ 27 ಲಕ್ಷವಾಗಿದೆ. ಇದನ್ನು ನೋಡಿದರೆ ದಕ್ಷತೆಯಿಂದ ಕೆಲಸ ಮಾಡುತ್ತಿಲ್ಲವೆಂದು ಹೇಳ ಬಹುದು. ಕಾರಣವೇನೆಂದರೆ ಅಂಗಡಿಗಳನ್ನು ಹರಾಜುಮಾಡುವ ವಿಷಯದಲ್ಲಿ ಸರಕಾರ ಕಂಟ್ರಾ ಕ್ಟರ್ ಕೈಗೊಂಬೆಯಾಗಿ ವರ್ಷೇವರ್ಷೆ ಬೇರೆ ಬೇರೆ ಕ್ರಮ ಅನುಸರಿಸುತ್ತಿದೆ. ಹಿಂದೆ ತಾಲ್ಲೂಕು ಯೂನಿಟ್ ಮಾಡಿ ಹರಾಜುಮಾಡುತ್ತಿದ್ದರು, ಜಿಲ್ಲೆ ಯೂನಿಟ್ ಮಾಡುವುದಕ್ಕೆ ಪ್ರಾರಂಭ ಮಾಡಿ ದರು. ಮುಂದೆ ಡಿವಿಜನ್ ಒಂದು ಯೂನಿಟ್ ಮಾಡಿ ಹರಾಜು ಮಾಡಿದ್ದಾರೆ. ಇದರಿಂದ ಹಣವಿರುವವರಿಗೆ ಮಾತ್ರ ಅರ್ನೆಸ್ಟ್ ಡಿಪಾಜಿಟ್ಟು ಕಟ್ಟಲು ಸಾಧ್ಯ, ಅವರು ಮಾತ್ರ ಹರಾಜಿನಲ್ಲಿ ಭಾಗವಹಿಸುತ್ತಾರೆ, ಸಣ್ಣ ಕಂಟ್ರಾಕ್ಟರುಗಳಿಗೆ ಹೆಚ್ಚು ಹಣ ಕಟ್ಟಲು ಸಾಧ್ಯವಿಲ್ಲ. ಹೀಗಾಗಿ ಕೆಲವರ ಮನಾಪಲಿಯನ್ನು ಸರಕಾರ ನಿರ್ಮಾಣ ಮಾಡುತ್ತಿದೆ. ಇದನ್ನು ಮಾಡದೆ ಸರಕಾರ ಪ್ರತಿ ಅಂಗಡಿಯನ್ನೂ ಹರಾಜು ಮಾಡಿದರೆ ಸರಕಾರಕ್ಕೆ ಜಾಸ್ತಿ ಹಣ ಬರುತ್ತದೆ. ಈಗಿರುವ ಪಾನ ನಿರೋಧವನ್ನು ಹೆಚ್ಚು ಪರಿಣಾಮಕಾರಿಯಾಗಿ ಜಾರಿಗೆ ಕೊಡಬೇಕು, ಇದರಿಂದ ಹೆಚ್ಚು ಅನುಕೂಲ ವಾಗುತ್ತದೆ. ಕಾರಣ ಅಂಕಿ ಅಂಶಗಳಿಂದ ವ್ಯಕ್ತವಾಗುವುದು. ನಮ್ಮ ಕರ್ನಾಟಕದಲ್ಲಿರುವ

(ಶ್ರೀ ಕೆ. ಎಚ್. ರಂಗನಾಥ್)

2ಕೋಟಿ 32 ಲಕ್ಷ ಪ್ರಜೆಯಲ್ಲಿ ಅರ್ಧ ಹೆಣ್ಣುಮಕ್ಕಳಿದ್ದಾರೆ, ಅವರು ಕುಡಿಯುವುದಿಲ್ಲ, ಕುಡಿಯುವವರ ಸಂಖ್ಯೆ ಸುಮಾರು ಸೇಕಡ 5–6 ಇರಬಹುದು. ಪೋಲೀಸರೂ ಕಳ್ಳಭಟ್ಟಿ ತಯಾರಿಸುವವರ ಜೊತೆಗೆ ಸೇರಿ ಷರೀಕಾಗಿರುವುದರಿಂದ ಪಾನನಿರೋಧ ಸರಿಯಾಗಿ ಜಾರಿಗೆ ಬಂದಿಲ್ಲ, ಕಳ್ಳಭಟ್ಟಿ ಹೆಚ್ಚಾಗಿದೆ, ನಿರೋಧವನ್ನು ರದ್ದುಮಾಡಿದರೆ ಸರಕಾರಕ್ಕೆ ಆದಾಯವಾದರೂ ಬರುತ್ತದೆ ಎಂದು ಹೇಳುತ್ತಾರೆ. ನಾಳೆ ಇದಕ್ಕೆ ಸಂಬಂಧಪಟ್ಟ ಬಿಲ್ಲು ಬರುತ್ತದೆ. ಇಂದು ನೋಡುವುದಾದರೆ 1967-68ರ ರಿವ್ಯೆಜ್ಡ್ ಅಂದಾಜು 4ಕೋಟಿ 38 ಲಕ್ಷಕ್ಕೆ ಆಗಿದೆ, ಹೋದ ಸಲ 4ಕೋಟಿ 5 ಲಕ್ಷ ವಿತ್ತು. ಈ ಅಂದಾಜಿನ ಪ್ರಕಾರ 30 ಲಕ್ಷ ಜಾಸ್ತಿಯಾಗಿದೆ, ಹೆಚ್ಚು ನಿರೀಕ್ಷೆಯಿಲ್ಲ. ಆದರೆ ಕಂಟ್ರಾಕ್ಟರುಗಳನ್ನು ಐಶ್ವರ್ಯವಂತರನ್ನಾಗಿ ಮಾಡುವುದಕ್ಕೆ ದಾರಿ ಮಾಡಿಕೊಡಲಾಗುತ್ತಿದೆ ಎಂಬ ಭಾವನೆಯಿದೆ. ಇದಕ್ಕೆ ಸಂಬಂಧಪಟ್ಟ ಇಲಾಖೆ ಸರಿಯಾಗಿ ಕೆಲಸಮಾಡುತ್ತಿಲ್ಲ, ಸರಕಾರ ಕಂಟ್ರಾಕ್ಟರ ಕೈಗೊಂಬೆಯಾಗಿದೆ. ಎಕ್ಸೈಜು ಡ್ಯೂಟಿ ಕಂಟ್ರಿ ಫರ್ಮೆಂಟೆಡ್ ಲಿಕ್ಕರ್‌ನಿಂದ 66–67 ರಲ್ಲಿ 86ಲಕ್ಷ ರೂಪಾಯಿ ಬರುತ್ತಿತ್ತು, 67-68ಕ್ಕೆ 81ಲಕ್ಷ ರೂಪಾಯಿ ಬರಬಹುದೆಂದು ಅಂದಾಜಿದೆ. ಕಂಟ್ರಿ ಫರ್ಮೆಂಟೆಡ್ ಲಿಕ್ಕರ್ ಷಾಪ್‌ರೆಂಟ್ 66-67ರಲ್ಲಿ 1 ಕೋಟಿ 42 ಲಕ್ಷ ಇತ್ತು, 67–68ರಲ್ಲಿ 1 ಕೋಟಿ 7 ಲಕ್ಷಕ್ಕೆ ಅಂದಾಜಾಗಿದೆ. ಇದನ್ನು ನೋಡಿದರೆ ಇಲಾಖೆಯವರು ದಕ್ಷತೆಯಿಂದ ಕೆಲಸಮಾಡುತ್ತಿಲ್ಲವೆಂದು ಕಂಡುಬರುತ್ತದೆ. ಇದನ್ನು ಗಮನಿಸಿ ಸರಕಾರ ದಕ್ಷತೆಯಿಂದ ಕೆಲಸಮಾಡಬೇಕೆಂದು ಅದಕ್ಕೆ ಸರಿಯಾದ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಸೇಲ್ಸ್ ಟ್ಯಾಕ್ಸ್ ಡಿಪಾರ್ಟ್‌ಮೆಂಟನ್ನು ತೆಗೆದುಕೊಳ್ಳುವುದಾದರೆ ಸೇಲ್ಸ್‌ಟ್ಯಾಕ್ಸ್ ಬಾಬಿನಿಂದ ಇವೊತ್ತು ನಮ್ಮ ರಾಜ್ಯದಲ್ಲಿ ಹೆಚ್ಚು ಉತ್ಪತ್ತಿ ಬರುತ್ತಿದೆ. ಹೋದ ಸಾರಿ 24ಕೋಟಿ ಇದ್ದದ್ದು ಈ ಸಾರಿ ರಿವ್ಯೆಜು ಮಾಡಿದುದರಿಂದ 26—27 ಕೋಟಿಯಷ್ಟು ಹೆಚ್ಚು ಬಂದಿದೆ. 67-68ರಲ್ಲಿ ಸುಮಾರು 29ಕೋಟಿಯಷ್ಟು ಬರುತ್ತದೆ ಎಂದು ನಿರೀಕ್ಷೆಗಿಂತ ಹೆಚ್ಚು ಆಶಿಸುತ್ತಿದ್ದಾರೆ. ಇನ್ನು ಕೆಲವು ಬಾಬುಗಳಮೇಲೆ ಸೇಲ್ಸ್ ಟ್ಯಾಕ್ಸ್ ಹಾಕುವುದು ತಪ್ಪು ಎಂದು ನನ್ನ ಅಭಿಪ್ರಾಯ, ಇದರಲ್ಲಿ ಮುಖ್ಯವಾದವುಗಳನ್ನು ಮಾತ್ರ ಇಲ್ಲಿ ಹೇಳುತ್ತೇನೆ. ಫುಡ್‌ಗ್ರೇನ್ಸ್ ಮೇಲೆ ಸೇಲ್ಸ್ ಟ್ಯಾಕ್ಸ್ ಹಾಕುವುದನ್ನು ತೆಗೆಯಬೇಕು, ಏಕೆಂದರೆ ದಿನೇ ದಿನೇ ಆಹಾರದ ಬೆಲೆಗಳು ಹೆಚ್ಚುತ್ತಾ ಹೋಗುತ್ತಿರುವುದರಿಂದ ಜನಗಳಿಗೆ ಬಹಳ ತೊಂದರೆಯಾಗುತ್ತಿದೆ. ಆಹಾರದ ಬೆಲೆ ಏರುತ್ತಿರುವ ಈ ಕಾಲದಲ್ಲಿ ಇಂತಹ ಪದಾರ್ಥಗಳ ಮೇಲೆ ಸೇಲ್ಸ್ ಟ್ಯಾಕ್ಸ್ ಹಾಕಿದರೆ ಸರಕಾರದವರೇ ಜನಗಳಿಗೆ ತೊಂದರೆ ಕೊಟ್ಟಂತಾಗುತ್ತದೆ, ಅಲ್ಲದೆ ಫರ್ಟಿಲೈಸರ್ಸ್‌ಗಳ ಮೇಲೆ ಹಾಗೂ ಎಸೆನ್‌ಷಿಯಲ್ ಕಮಾಡಿಟೀಸ್‌ಗಳ ಮೇಲೆ ಇರತಕ್ಕ ಟ್ಯಾಕ್ಸ್‌ಗಳನ್ನು ತೆಗೆಯಬೇಕು, ಇನ್ನು ಬೇರೆ ರೀತಿಯಲ್ಲಿ ಸರಕಾರ ಇಲ್ಲಿ ಆಗತಕ್ಕ ಕೊರತೆಯನ್ನು ತುಂಬಲು ಪ್ರಯತ್ನ ಮಾಡಬೇಕು. ಇನ್ನು ಅದರ್ ಟ್ಯಾಕ್ಸಸ್ ಗಳೆಂಬ ಬಾಬಿನಲ್ಲಿ ಬೆಟ್ಟಿಂಗ್ ಟ್ಯಾಕ್ಸ್ ಇದರಿಂದ ಸುಮಾರು 42 ಲಕ್ಷ ಬರುತ್ತದೆ ಎಂದು ಅಂದಾಜು ಮಾಡಿದ್ದಾರೆ. ಇದು ಸಾಹುಕಾರರು ಹಾಗೂ ಶ್ರೀಮಂತರು ಶನಿವಾರ ಭಾನುವಾರ ಕುದುರೆಯ ಮೇಲೆ ಯಥೇಚ್ಛವಾಗಿ ಹಣ ಸುರಿದು ಸಂಪಾದನೆ ಮಾಡುವ ಬಾಬು. ಇಂತಹವರ ಮೇಲೆ ಇನ್ನೂ ಹೆಚ್ಚು ಟ್ಯಾಕ್ಸ್ ಹೇರಿ ಅದರಿಂದ ಕೊರತೆಯನ್ನು ತುಂಬಿಕೊಳ್ಳಬಹುದು ಎಂದು ನನ್ನ ಸಲಹೆ. ಇನ್ನು ಸೇಲ್ಸ್ ಟ್ಯಾಕ್ಸನ್ನು ಫುಡ್ ಗ್ರೇನ್ಸ್ ಹಾಗೂ ಫರ್ಟಿಲೈಸರ್ಸ್‌ಗಳ ಮೇಲಿರುವುದನ್ನು ತೆಗೆಯಬೇಕು, ಲಗ್ಜುರಿ ಆರ್ಟಿಕಲ್ಸ್‌ಗಳ ಮೇಲೆ ಹೆಚ್ಚು ತೆರಿಗೆ ಹಾಕಬೇಕು ಎಂದು ನಾನು ಹೇಳುತ್ತೇನೆ. ಅಲ್ಲದೆ ಮಲ್ಟಿ ಪಾಯಿಂಟು ಸೇಲ್ಸ್ ಟ್ಯಾಕ್ಸನ್ನು ತೆಗೆಯಬೇಕು, ಸಿಂಗಲ್ ಪಾಯಿಂಟು ಟ್ಯಾಕ್ಸ್ ಸರಕಾರ ಹಾಕಬೇಕು. ಬೇರೆ ಟ್ಯಾಕ್ಸ್‌ಗಳನ್ನು ಹಾಕಬಾರದು, ಹೊಸದಾಗಿ ಟ್ಯಾಕ್ಸ್‌ಗಳನ್ನು ಹಾಕುವುದಾದರೆ ಬಳಕೆದಾರರಿಗೆ ಬಹಳ ತೊಂದರೆಯಾಗುತ್ತದೆ.

ಇನ್ನು ಸೇಲ್ಸ್‌ಟ್ಯಾಕ್ಸ್ ಡಿಪಾರ್ಟ್‌ಮೆಂಟಿನಲ್ಲಿ ನಾವು ನಿರೀಕ್ಷಿಸಿದಷ್ಟು ಕೆಲಸ ನಡೆಯುತ್ತಿಲ್ಲ. ಇಲ್ಲಿ ಅಂಡರ್ ಅಸೆಸ್‌ಮೆಂಟು ಹಾಗೂ ಅಂಡರ್ ಎಸ್ಟಿಮೇಟುಗಳನ್ನು ಮಾಡುವುದು ಹೆಚ್ಚಾಗಿದೆ. ಇಲ್ಲಿರತಕ್ಕ ಅನೇಕ ನೌಕರರು ಯಥೇಚ್ಛವಾಗಿ ಸಂಪಾದನೆ ಮಾಡಿಕೊಂಡು ಐಶ್ವರ್ಯವಂತರಾಗಿದ್ದಾರೆ. ಕೇವಲ ಇನ್ನೂರು ಹಾಗೂ ಮುನ್ನೂರು ಸಂಬಳ ಬರುವ ಜನ ಬೇಕಾದಷ್ಟು ಸಂಪಾದನೆ ಮಾಡಿ ಆಸ್ತಿಗಳನ್ನು ಮಾಡಿಕೊಂಡಿದ್ದಾರೆ. ಇದನ್ನು ನೋಡಿದರೆ ನಿಮಗೇ ಆಶ್ಚರ್ಯವಾಗಬಹುದು. ಈ ಇಲಾಖೆಯಲ್ಲಿ ಕೆಲವರಿಗೆ ಸರಿಯಾದ ಪ್ರಮೋಷನ್ ವಗೈರೆ ಕೊಡದೆ ಇಂದು ಬಹಳ ಜನರಿಗೆ ತಾರಂತಮ್ಯ ಮಾಡುತ್ತಿದ್ದಾರೆ. ಇದರಿಂದಾಗಿ ಇವೊತ್ತು ಬೇಕಾದಷ್ಟು ರಿಟ್‌ಪಿಟಿಷನ್‌ಗಳು ಹೈಕೋರ್ಟಿನಲ್ಲಿವೆ. ಅಲ್ಲದೆ ಸರಕಾರದವರು ಹೈಕೋರ್ಟಿನವರು ಕೊಟ್ಟ ತೀರ್ಮಾನಕ್ಕೆ ಕೂಡ ಇಲಾಖೆಯವರು ತಲೆಬಾಗುವುದಿಲ್ಲ, ಇದರಿಂದ ಅನೇಕರಲ್ಲಿ ಅಶ್ರದ್ಧೆ ಹಾಗೂ ನಿರುತ್ಸಾಹಗಳು

ಹೆಚ್ಚಾಗಿ ಅನೇಕರಿಗೆ ಬಹಳ ತೊಂದರೆಗಳಾಗಿವೆ ಎಂದು ಈ ಸಭೆಯ ಗಮನಕ್ಕೆ ತರಬೇಕಾಗಿದೆ. ಒಂದು ನಿದರ್ಶನ ನನಗೆ ಚೆನ್ನಾಗಿ ಗೊತ್ತಿದೆ. ಎಕ್ಸೈಜ್ ಡಿಪಾರ್ಟ್‌ಮೆಂಟಿನಲ್ಲಿದ್ದ ಒಬ್ಬರನ್ನು ಸೇಲ್ಸ್‌ಟ್ಯಾಕ್ಸ್ ಡಿಪಾರ್ಟಮೆಂಟಿಗೆ ತಂದು ಅವರನ್ನು ಎಲ್ಲರ ಮೇಲೆ ಕೂರಿಸಿ ಅವರಿಗೆ ಬಡ್ತಿ ಕೊಟ್ಟು ಇದ್ದ ಅಸಿಸ್ಟೆಂಟ್ ಕಮೀಷನರವರನ್ನು ಕೆಳಗೆ ಮಾಡಿ, ಅವರಿಗೆ ಈಗ ಡೆಪ್ಯುಟಿ ಕಮೀಷನರ ಕೆಲಸ ಕೊಡಬೇಕೆಂದು ಸರಕಾರ ಪ್ರಯತ್ನ ಮಾಡುತ್ತಿದೆ, ಬೇಕಾದರೆ ಅವರ ಹೆಸರನ್ನು ಹೇಳಬಹುದು. ಆದರೆ ಇಲ್ಲಿ ಹೇಳುವುದಿಲ್ಲ. ಹೀಗೆ ಇತರರಿಗೆ ಅನ್ಯಾಯಮಾಡಿ ಇನ್ನೊಬ್ಬರಿಗೆ ತೊಂದರೆಯಾಗುವಂತೆ ಸರಕಾರ ಮಾಡಿದರೆ ಅಲ್ಲಿ ಕೆಲಸ ಮಾಡತಕ್ಕ ನೌಕರರಲ್ಲಿ ಉತ್ಸಾಹ ಹೇಗೆತಾನೇ ಬರಬೇಕು ? ಬೇರೆ ಇಲಾಖೆಯವರನ್ನು ಇಲ್ಲಿ ತಂದು ಎಲ್ಲರ ಮೇಲೆ ಇಡತಕ್ಕದ್ದು ನ್ಯಾಯವಾಗಿಲ್ಲ ಎಂದು ಸರಕಾರಕ್ಕೆ ಗೊತ್ತಿದ್ದರೂ ಮಾಡುತ್ತಿದ್ದಾರೆ. ಇದು ಸರಕಾರಕ್ಕೆ ಗೊತ್ತಿಲ್ಲದೆ ನಡೆಯುತ್ತಿಲ್ಲ. ಸರಕಾರಕ್ಕೆ ಗೊತ್ತಿದ್ದೇ ಇಂತಹ ಕೆಲಸಗಳು ನಡೆಯುತ್ತಿವೆ. ಇದರಿಂದಾಗಿ ಈ ಇಲಾಖೆಯಲ್ಲಿ ಕೆಲಸಗಳು ಚೆನ್ನಾಗಿ ನಡೆಯುವುದಿಲ್ಲ, ಇನ್ನು ಟ್ಯಾಕ್ಸಿನ ಲೀಕೇಜುಗಳು ನಮ್ಮ ಕಣ್ಣಿಗೆ ಕಾಣುವಂತೆಯೇ ನಡೆಯುತ್ತಿವೆ. ಇದನ್ನು ತಡೆಗಟ್ಟಲು ಸರಕಾರ ಇನ್ನೂ ಹೆಚ್ಚು ನಿಗಾ ವಹಿಸಬೇಕು. ಹಾಗೆ ಮಾಡಿದರೆ ಇನ್ನೂ ಹೆಚ್ಚು ಉತ್ಪತ್ತಿ ಪಡೆಯಲು ಸಾಧ್ಯವಾಗುತ್ತದೆ. ಸರಕಾರದವರು ಇದರ ಕಡೆಗೆ ನಿಗಾ ವಹಿಸಬೇಕು ಫುಡ್‌ಗ್ರೇನ್ಸ್ ಮೇಲೆ ಇರುವ ಸೇಲ್ಸ್‌ಟ್ಯಾಕ್ಸನ್ನು ತೆಗೆಯಬೇಕು. ಇಲ್ಲದೇ ಇದ್ದರೆ ಆಹಾರ ದವಸಗಳನ್ನು ಕೊಳ್ಳುವವರ ಮೇಲೆ ಹಾಗೂ ಇತರ ಬಡ ಜನರ ಮೇಲೆ ವಿಪರೀತ ವಾಗಿ ಹೊರೆಬೀಳುತ್ತದೆ. ಇದನ್ನು ತಪ್ಪಿಸಬೇಕು ಎಂದು ಇಷ್ಟು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಪ್ಪ (ಬೀರೂರು).—ಮಾನ್ಯ ಅಧ್ಯಕ್ಷರೇ ಮಾನ್ಯ ಅರ್ಥಮಂತ್ರಿಗಳು ಇಲ್ಲಿ ಮಂಡಿಸಿರತಕ್ಕ ಡಿಮ್ಯಾಂಡುಗಳನ್ನು ವಿರೋಧಿಸುತ್ತ ಒಂದೆರಡು ಸೂಚನೆಗಳನ್ನು ಈ ಸಮಯದಲ್ಲಿ ಕೊಡಬಯಸುತ್ತೇನೆ.

ಸೇಲ್ಸ್‌ಟ್ಯಾಕ್ಸನ್ನು ತೆಗೆದುಕೊಂಡು ಬಂದು ಸಣ್ಣ ವ್ಯಾಪಾರಗಾರರುಗಳ ಮೇಲೆ ವಿಧಿಸಿರುವ ತೆರಿಗೆ ನೀತಿಯಲ್ಲಿ ಹಾಗೂ ವಸೂಲು ಮಾಡತಕ್ಕ ನೀತಿಯಲ್ಲಿ ಬಹಳ ಕಿರುಕುಳಗಳು ಆಗುತ್ತಿವೆ ಎನ್ನು ವುದನ್ನು ಎಲ್ಲರೂ ಒಪ್ಪಲೇಬೇಕು. ಏತಕ್ಕೆಂದರೆ, ಸೇಲ್ಸ್‌ಟ್ಯಾಕ್ಸ್ ಇವೊತ್ತು ವಿಧಿಸಿರುವುದನ್ನು ನೋಡಿದರೆ ಆಹಾರಧಾನ್ಯಗಳ ಮೇಲೆ ಹಾಕಿದ್ದಾರೆ. ಇದರಿಂದ ನಿಜವಾಗಿಯೂ ಬಡ ಜನರಿಗೆ ಹಾಗೂ ಕೊಳ್ಳುವವರಿಗೆ ಬಹಳ ಅನ್ಯಾಯಗಳಾಗುತ್ತಿವೆ. ಮೊದಲು ಆಹಾರಧಾನ್ಯಗಳ ಮೇಲೆ ಹಾಕಿ ರುವ ಸೇಲ್ಸ್‌ಟ್ಯಾಕ್ಸನ್ನು ಖಂಡಿತ ಜನಗಳ ಹಿತದೃಷ್ಟಿಯಿಂದ ಬಡ ಜನರ ಹಿತದೃಷ್ಟಿಯಿಂದ ರದ್ದು ಮಾಡಬೇಕು ಎಂದು ನಾನು ತಮ್ಮ ಮೂಲಕ ಸರಕಾರಕ್ಕೆ ಸೂಚನೆ ಕೊಡಬಯಸುತ್ತೇನೆ. ಸಾಮಾನ್ಯವಾಗಿ ವ್ಯವಸಾಯಗಾರನಿಗೆ ಸೇಲ್ಸ್‌ಟ್ಯಾಕ್ಸಿನ ಹಿಡಿತ ಬರುವುದಿಲ್ಲ ಕೊಳ್ಳುವವರ ಮೇಲೆ ಬರುತ್ತದೆ. ಇನ್ನು ಅಡಕೆಯ ಮೇಲೆ ಸರಕಾರದವರು ಮಾರಾಟ ತೆರಿಗೆಯನ್ನು ಹಾಕಿದ್ದಾರೆ ಇದು ಹಾಕಿರುವ ರೀತಿ ಒಂದು ವಿಚಿತ್ರವಾಗಿದೆ, ಅಡಕೆ ಬೆಳೆಯುವವರ ಮೇಲೆ ಸಾಮಾನ್ಯವಾಗಿ ತೆರಿಗೆ ಬೀಳುತ್ತಿಲ್ಲ, ಮಾರುವವರ ಮೇಲೆ ತೆರಿಗೆ ಬೀಳುತ್ತದೆ ಇದರಲ್ಲಿ ತೆರಿಗೆ ಮೊದಲಿಂದಲೂ ಯಾವ ರೀತಿ ಇದೆ ಎಂದರೆ, ಬೆಳೆಯುವವರಿಗೇ ಒಂದು ರೀತಿಯ ತೆರಿಗೆ, ಅನಂತರ ಅಡಕೆ ಕಾಯಿಯನ್ನು ತೆಗೆದು ಮಾರಾಟ ಮಾಡುವವರಿಗೇ ಬೇರೆ ರೀತಿಯ ತೆರಿಗೆ ಈ ರೀತಿ ವಸೂಲು ಮಾಡುತ್ತಿದ್ದರು, ಅಡಕೆ ಬೆಳೆ ಯಲ್ಲಿ ಹೂವಾಗಿ ಕಾಯಾಗಿ ತೆಗೆದುಕೊಂಡು ಬರುವವರಿಗೆ ಒಂದು ರೀತಿಯ ತೆರಿಗೆ, ಅನಂತರ ಕಾಯನ್ನು ಬೇರೆ ಸಿದ್ಧಮಾಡಿ ಮಾರುವವರಿಗೆ ಒಂದು ರೀತಿಯ ತೆರಿಗೆ, ಹೀಗೆ ಸೇಲ್ಸ್ ಟ್ಯಾಕ್ಸ್ ವಸೂಲಿ ಮಾಡುವುದು ಇವೊತ್ತಿನವರಗೂ ಇದೆ. ಆದರೆ ಅಡಕೆ ವಿಚಾರ ಹೇಗಿದೆ ಎಂದರೆ, ಬೆಳೆಯು ವವನೇ ಒಬ್ಬ ಮಾರುವವನೇ ಒಬ್ಬ. ಅಡಕೆ ಬೆಳೆಯುವವನು ಅದು ಬೆಳೆದು ಹೂವಾಗಿ ಹೀಚಾಗಿ ಕಾಯಾಗಿ ಆದ ಮೇಲೆ ಅದನ್ನು ತಯಾರು ಮಾಡಲು ಇನ್ನೊಬ್ಬರು ಮರದ ಮೇಲೆ ಕೊಳ್ಳುತ್ತಾರೆ. ಅಡಕೆ ಬೆಳೆಯುವವರ ಮೇಲೆ ಈಗ ನೋಟೀಸು ಕೊಟ್ಟು ಹೆಚ್ಚು ಸೇಲ್ಸ್ ಟ್ಯಾಕ್ಸ್ ಕೊಡಬೇಕೆಂದು ಮಾಡುತ್ತಿದ್ದಾರೆ. ಈ ರೀತಿ ಮಾಡುವುದನ್ನು ತೆಗೆಯಬೇಕು. ವ್ಯವಸಾಯಗಾರರಿಗೆ ಇದರಿಂದ ತುಂಬಾ ತೊಂದರೆಯಾಗುತ್ತಿದೆ. ಮಾರುವವರ ಮೇಲೆ ಟ್ಯಾಕ್ಸ್ ಹಾಕಬೇಕು. ಬೆಳೆಯುವವರ ಮೇಲೆ ತೆರಿಗೆ ಹಾಕು ವುದನ್ನು ಕೈಬಿಡಬೇಕೆಂದು ಈ ಸಮಯದಲ್ಲಿ ಸರಕಾರಕ್ಕೆ ಹೇಳಬಯಸುತ್ತೇನೆ. ಪಾನವಿರೋಧದ ಮೇಲೆ ಈಗಾಗಲೇ ಬೇಕಾದಷ್ಟು ಚರ್ಚೆ ನಡೆದಿದೆ, ಪಾನನಿರೋಧವನ್ನು ಖಂಡಿತ ರದ್ದು ಮಾಡಬೇಕು. ಸರಕಾರ ಈ ವಿಚಾರದಲ್ಲಿ ಬಹಳ ದಿಟ್ಟತನದಿಂದ ಕೂಡಿದ ನೀತಿಯನ್ನು ಅನುಸರಿಸಬೇಕು ಎಂದು ನಾನು ಇಲ್ಲಿ ಹೇಳಬಯಸುತ್ತೇನೆ. ಏತಕ್ಕೆಂದರೆ, ಪಾನನಿರೋಧ ನೀತಿಯನ್ನು ಸರಕಾರ ಜಾರಿಗೆ ತಂದು ವಿಫಲವಾಗಿದೆ, ಸುಮಾರು ಇಪ್ಪತ್ತು ವರ್ಷಗಳಿಂದಲೂ ಇದನ್ನು ಜಾರಿಗೆ ತಂದರೂ ಇದರಿಂದ ಆಗುತ್ತಿರುವ ತೊಂದರೆಗಳಿಗೆ ಇತಿಮಿತಿಯೇ ಇಲ್ಲ. ಇದರ ಬಗ್ಗೆ ಕೊಡುತ್ತಿರುವ ಕಾರಣಗಳಾಗದ್ದೇ

(ಶ್ರೀ ಎಂ. ಮಲ್ಲಪ್ಪ)

ಅಶ್ವಾಸನೆಗಳಾಗಲೀ ಯಾವುದೂ ಸರಿಯಾಗಿಲ್ಲ ಮತ್ತು ಇದರಿಂದ ನಾವು ತಲೆತಗ್ಗಿಸಬೇಕಾದ ಸಂದರ್ಭ ಬಂದುಬಿಟ್ಟಿದೆ. ಸುಮಾರು ಇಪ್ಪತ್ತು ವರ್ಷಗಳಿಂದಲೂ ಕಳ್ಳತನದಿಂದ ಕುಡಿಯುವವರೇ ಹೆಚ್ಚಾಗಿದ್ದಾರೆ ಮತ್ತು ಕಳ್ಳಬಟ್ಟಿ ತಯಾರು ಮಾಡುವವರೂ ಹೆಚ್ಚಾಗಿದ್ದಾರೆ. ಹಿಂದೆ ಸಾಮಾನ್ಯವಾಗಿ ನಾವು ನೋಡಿದಂತೆ ಯಾರಾದರೂ ಕುಡಿಯುವವರು ಇದ್ದರೆ ಅವರು ಒಂದು ಕಡೆ ಹೋಗಿ ಗುಟ್ಟಾಗಿ ಕುಡಿದು ಬರುತ್ತಿದ್ದರು, ಇವೊತ್ತಿನ ದಿವಸ ಏನಾಗಿದೆ ಎಂದರೆ, ಮನೆ ಮನೆಯಲ್ಲಿಯೂ ಕಳ್ಳಬಟ್ಟಿ ಹೆಚ್ಚಾಗಿ ಕುಡಿಯುವ ಜನರೇ ಹೆಚ್ಚಾಗಿದ್ದಾರೆ, ಇವರಿಂದ ಸಾಕಷ್ಟು ವರಮಾನ ಪೋಲೀಸಿನವರಿಗೂ ಸಿಗುತ್ತದೆ ಮತ್ತು ಇದು ಒಂದು ತರಹ ಮಾಮೂಲಾಗಿಬಿಟ್ಟಿದೆ. ಪೋಲೀಸಿನವರು ಇಷ್ಟು ಕೇಸುಗಳನ್ನು ಕೊಡಬೇಕೆಂದು ಅವರಿಗೆ ಒಂದು ಅಂಕಿ ಸಂಖ್ಯೆಗಳ ನಿಯಮ ಇರುತ್ತದೆ, ಇದರಂತೆ ಅವರು ತಮಗೆ ಬೇಕಾದಷ್ಟು ಕೇಸುಗಳನ್ನು ಹಿಡಿದುಕೊಂಡು ಸರಕಾರಕ್ಕೆ ಒಪ್ಪಿಸಿ ಉಳಿದವುಗಳನ್ನು ಕಂಡೂ ಕಾಣದಂತೆ ಇರುತ್ತಾರೆ. ಇದೊಂದು ಅವರಿಗೆ ಮಾಮೂಲಾಗಿಬಿಟ್ಟಿದೆ ಇದನ್ನು ನೋಡಿದರೆ ನಿಜವಾಗಿಯೂ ಒಳ್ಳೆಯ ಜನರು ಇದನ್ನು ನೋಡಿಕೊಂಡು ತಲೆ ತಗ್ಗಿಸಬೇಕಾಗಿದೆ. ಪಾನ ನಿರೋಧವನ್ನು ರದ್ದು ಮಾಡಬೇಕಾದರೆ ಇದರಿಂದ ಬರುವ ಉತ್ಪತ್ತಿಯನ್ನು ಬೇರೆ ವಿಧದಿಂದ ಪಡೆದು ನಮ್ಮ ಆರ್ಥಿಕಸ್ಥಿತಿಯನ್ನು ಉತ್ತಮಮಾಡಿಕೊಳ್ಳಬಹುದು. ಈ ರೀತಿ ಮಾಡಿದರೆ ದೇಶದ ಜನರ ಕಲ್ಯಾಣ ಮಾಡಿದಂತಾಗುತ್ತದೆ ಹಾಗೂ ಮುಂದಿನ ಪೀಳಿಗೆಯ ಜನಾಂಗದವರಿಗೂ ಕುಡಿಯುವುದು ತಪ್ಪು ಎನ್ನುವುದು ಅವರ ಮನಸ್ಸಿಗೆ ಬರುವಂತಾಗುತ್ತದೆ, ಇದಕ್ಕೆ ಬೇಕಾದರೆ ಒಂದು ತಿದ್ದುಪಡಿಯನ್ನೂ ತಂದು ಅದನ್ನು ಕಟ್ಟುನಿಟ್ಟಾಗಿ ಆಚರಣೆಗೆ ತಂದು ಜಾರಿಗೆ ತಂದರೆ ಆಗ ಖಂಡಿತ ಅವರು ಕುಡಿಯುವುದಿಲ್ಲ. ಏನೋ ಒಂದು ಅಭ್ಯಾಸಬಲದಿಂದ ಇಂದು ಎಲ್ಲರೂ ಕುಡಿಯುವವರೇ ಆಗಿದ್ದಾರೆ. ಎಲ್ಲ ಕಡೆಯಲ್ಲಿಯೂ ಕಳ್ಳಬಟ್ಟಿ ಜಾಸ್ತಿಯಾಗಿದೆ ಎಂದು ಹೇಳಬಹುದು. ಯಾರೋ ಕೆಲವು ಜಾತಿಯವರು ಕುಡಿಯುತ್ತಾರೆ ಎಂದು ಹೇಳುತ್ತಾ ಇದ್ದರು, ಇವತ್ತು ಇರತಕ್ಕದ್ದು ಎರಡೇ ಜಾತಿ. ಕುಡಿಯುವವರ ಜಾತಿ ಕುಡಿಯದೇ ಇರುವವರ ಜಾತಿ. ಅಷ್ಟೇ ಹೊರತು ಇನ್ನಾವ ಜಾತಿಯೂ ಇಲ್ಲ ಎನ್ನುವುದನ್ನು ತಿಳಿದುಕೊಳ್ಳಬೇಕೆಂದು ಹೇಳಬಯಸುತ್ತೇನೆ. ಈಗ ಎಂಟು ವರ್ಷಗಳ ಹಿಂದೆ ಈ ಪಾನವಿರೋಧವನ್ನು ಹೇಗೆ ಜಾರಿಗೆ ತರುತ್ತಾ ಇದ್ದರು ಎಂಬ ಒಂದು ನಿದರ್ಶನ ನನ್ನ ಗಮನಕ್ಕೆ ಬಂದದ್ದನ್ನು ಈ ಸಭೆಯ ಮುಂದಿಡಲಿಕ್ಕೆ ಬಯಸುತ್ತೇನೆ. ಈಗ ಎಂಟು ವರ್ಷಗಳ ಹಿಂದೆ ಒಮ್ಮೆ ಮಂಗಳೂರಿಗೆ ಹೋಗಿದ್ದಾಗ ಅಲ್ಲಿ ಒಂದು ಹೋಟೇಲಿನಲ್ಲಿ ತಂಗಿದ್ದೆ. ಬೀದಿಯಲ್ಲಿ ಪೋಲೀಸ್ ಉಡುಪನ್ನು ದರಿಸಿದವನು ಒಬ್ಬನು ಇದ್ದ ಅವನು ನನ್ನನ್ನು ನೋಡಿ, ನಿಮಗೆ ಅಭ್ಯಾಸ ಇದ್ದರೆ ನೋಡಿ ಆ ಎದುರು ಅಂಗಡಿಗೆ ಹೋಗಿ ಬೇಕಾದರೆ ನಿಮಗೆ ಕುಡಿಯುವುದಕ್ಕೆ ಸಿಕ್ಕುತ್ತದೆ ಎಂದು ಹೇಳಿದ. ಹೀಗಾದರೆ ಪೋಲೀಸ್‌ನವರ ಮೇಲೆ ಎಷ್ಟು ವಿಶ್ವಾಸವಿಡಬಹುದು ಎಂಬುದನ್ನು ತಾವು ಯೋಚನೆ ಮಾಡಬೇಕು. ಸಮಾಜದಲ್ಲಿ ತಲೆ ಎತ್ತಿಕೊಂಡು ತಿರುಗಾಡುವುದಕ್ಕೆ ಸಾಧ್ಯವೇ ? ಶಾಸಕಾಂಗವಾಗಲಿ, ನ್ಯಾಯಾಂಗವಾಗಲಿ, ಕಾರ್ಯಾಂಗವಾಗಲಿ ಯಾವ ರೀತಿ ತಲೆ ಎತ್ತಿಕೊಂಡು ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ ? ಆದ್ದರಿಂದ ಈ ಪಾನನಿರೋಧವನ್ನು ರದ್ದುಮಾಡಿ ಮೊದಲು ಯಾವ ರೀತಿ ಇತ್ತೋ ಅದೇ ರೀತಿ ಕುಡಿಯುವುದಕ್ಕೆ ಅವಕಾಶ ಕೊಡಿ. ವಿದ್ಯೆ ಕೊಡಿ, ಆರ್ಥಿಕಮಟ್ಟವನ್ನು ಉತ್ತಮಪಡಿಸಿ ಅನುಕೂಲ ಮಾಡಿಕೊಡುವುದರ ಕಡೆಗೆ ಸರ್ಕಾರ ಗಮನ ಕೊಡುವುದು ಒಳ್ಳೆಯದು ಎಂದು ಹೇಳಬಯಸುತ್ತೇನೆ.

ಇನ್ನು ಪೆನ್‌ಷನ್‌ದಾರರುಗಳಿಗೆ ಕೊಡತಕ್ಕ ರೀತಿನೀತಿಯಲ್ಲಿ ಬದಲಾವಣೆಯಾಗಬೇಕು ಎಂದು ಸೂಚನೆ ಮಾಡಬಯಸುತ್ತೇನೆ. ಅಧ್ಯಾಪಕರುಗಳಿಗೆ ತೊಂದರೆಯಾಗಿದೆ, ಅವರಿಗೆ ಮನಿ ಆರ್ಡರ್ ಮೂಲಕ, ಚೆಕ್ ಮೂಲಕ ಕೊಡುತ್ತೇವೆ ಎಂದು ಅನ್ನುತ್ತಾರೆ, ತಾಲ್ಲೂಕು ಆಫೀಸು, ಡಿಸ್ಟ್ರಿಕ್ಟ್ ಕಚೇರಿಗಳಲ್ಲಿ ಅವರು ಗಂಟೆಗಟ್ಟಲೆ ಕಾಯಬೇಕಾಗಿದೆ. ಆದ್ದರಿಂದ ಚೆಕ್ ಅಥವಾ ಮನಿ ಆರ್ಡರ್ ಮುಖಾಂತರ ಇವರಿಗೆ ಪೆನ್‌ಷನ್ ಕೊಟ್ಟು ಅವರ ಕಷ್ಟವನ್ನು ಪರಿಹಾರ ಮಾಡಬೇಕೆಂದು ಸೂಚನೆ ಮಾಡುತ್ತೇನೆ. ಇಷ್ಟು ವಿಷಯವನ್ನು ಮಾತನಾಡಲಿಕ್ಕೆ ಅವಕಾಶಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ಹೃತ್ಪೂರ್ವಕವಾಗಿ ವಂದಿಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಸಭೆಯ ಮುಂದೆ ನಾನು ಮಂಡಿಸಿದಂತಹ ಬೇಡಿಕೆಯ ಮೇಲೆ ಮಾನ್ಯ ಸದಸ್ಯರು ಅನೇಕ ಒಳ್ಳೆಯ ಸಲಹೆಗಳನ್ನೂ, ಸೂಚನೆಗಳನ್ನೂ ಕೊಟ್ಟಿದ್ದಾರೆ. ಅದಕ್ಕೆ ನಾನು ಅವರಿಗೆ ಕೃತಜ್ಞತೆಯನ್ನು ಪ್ರಾರಂಭದಲ್ಲೇ ವ್ಯಕ್ತಪಡಿಸುವುದಕ್ಕೆ ಇಷ್ಟಪಡುತ್ತೇನೆ. ಇನ್ನು ನಡೆದಂಥ ಚರ್ಚೆಯಲ್ಲಿ ಒಂದು ಮಾತು ಎದ್ದು ಕಾಣುತ್ತಾ ಇದೆ ಮತ್ತು ಅದನ್ನು ಈಗ ತುಂಬಾ ಸಂತೋಷದಿಂದ ಹೇಳಲಿಕ್ಕೆ ಬಯಸುತ್ತೇನೆ. ಅದೇನೆಂದರೆ, ರಚನಾತ್ಮಕ ಅಪ್ರೋಚ್, ಅವರ

ಮಾತಿನಲ್ಲಿ ಹೇಳುವುದಾದರೆ ಸರ್ಕಾರದ ಕೆಲಸಕಾರ್ಯಗಳಲ್ಲಿ ದೋಷ ಇಲ್ಲ ಎಂದು ಹೇಳತಕ್ಕ ಮಾತು ಸಾಧನೆ ಮಾಡುವುದಕ್ಕೆ ನಾನು ಶಕ್ತನಲ್ಲ. ಸರ್ಕಾರದ ಕೆಲಸ ಬಹಳ ದೊಡ್ಡದು, ಜವಾಬ್ದಾರಿಯೂ ಬಹಳ ದೊಡ್ಡದು; ಮತ್ತು ಈ ಕೆಲಸ ಕಾರ್ಯಗಳನ್ನು ನೌಕರವರ್ಗದವರ ಮೇಲೆ ನಿಂತು ಮಾಡಿಸಬೇಕಾಗುತ್ತದೆ. ಆದ್ದರಿಂದ ಮನುಷ್ಯ ಸ್ವಭಾವದಲ್ಲಿ ಸೇರಿರತಕ್ಕ ಅನೇಕ ದೋಷಗಳು ಇದರಲ್ಲಿ ವ್ಯಕ್ತವಾಗಿವೆ, ಇದು ಆಶ್ಚರ್ಯವೇನೂ ಅಲ್ಲ. ಆ ದೃಷ್ಟಿಯಿಂದ ನೋಡಿದರೆ ಯಾವುದೇ ಒಂದು ಘಟನೆಯಾಗಲಿ ಅವರ ಕೆಲಸದಲ್ಲಿ ಇನ್ನೂ ಹೆಚ್ಚು ಸುಧಾರಣೆಯಾಗಲಿಕ್ಕೆ ಅವಕಾಶವಿದೆ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇಂದು ಮಾನ್ಯ ಸದಸ್ಯರು ಮುಖ್ಯವಾದ 3-4 ವಿಷಯಗಳನ್ನು ಎತ್ತಿಕೊಂಡು ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ್ದಾರೆ. ಮೊದಲನೆಯದು ಮಾರಾಟ ಕರದ ಕಾಯಿದೆ ಕೆಲಸದ ವಿಷಯದಲ್ಲಿ. ಮತ್ತು ಮಾರಾಟ ಕರದ ಕಾಯಿದೆಯಲ್ಲಿ ಇರತಕ್ಕ ದೋಷಗಳು, ಅವನ್ನು ಜಾರಿಯಲ್ಲಿ ತರುವಾಗ ಆಗತಕ್ಕ ತೊಂದರೆಗಳು ಮತ್ತು ಅದರ ಜೊತೆಗೆ ಒಬ್ಬಿಬ್ಬರು ಸದಸ್ಯರು ವ್ಯವಸಾಯದ ಉತ್ಪಾದನೆಯ ಮೇಲೆ ಏನು ಕರವನ್ನು ಹಾಕುತ್ತೇವೆ ಅದರ ವಿಚಾರವನ್ನೂ ಕೂಡ ಪ್ರಸ್ತಾಪ ಮಾಡಿ ಕೆಲವು ಮಾತುಗಳನ್ನು ಆಡಿದ್ದಾರೆ. ಮಾರಾಟ ಕರ ಇಂದು ಈ ನಮ್ಮ ಸರ್ಕಾರದ ಅತಿದೊಡ್ಡ ಮತ್ತು ಅತಿ ಮುಖ್ಯವಾದಂಥ ಆದಾಯ ಬಾಬುಗಳಲ್ಲಿ ಒಂದು. 1957-58ನೇ ಇಸವಿಯಲ್ಲಿ ಕೇವಲ 5 ಕೋಟಿ ರೂಪಾಯಿ ಆದಾಯ ಪಡೆದಂಥ ಈ ಬಾಬಿನಿಂದ ಈ ಚಾಲ್ತಿವರ್ಷಕ್ಕೆ ಸುಮಾರು 29-30ಕೋಟಿ ರೂಪಾಯಿಗಳಷ್ಟು ಆದಾಯ ಬರಬಹುದು ಎಂಬ ನಿರೀಕ್ಷೆಯನ್ನು ನಾವು ಮಾಡುತ್ತಾ ಇದ್ದೇವೆ. ಈ ಮಾರಾಟ ಕರದ ಕಾಯಿದೆಗೆ ಅನೇಕ ಸಲ ನಾವು ತಿದ್ದುಪಡಿಯನ್ನು ಮಾಡಿದ್ದೇವೆ. ತಿದ್ದುಪಡಿ ಮಾಡುವಾಗ ಎರಡು ಉದ್ದೇಶಗಳನ್ನು ಇಟ್ಟುಕೊಂಡು ಮಾಡಿದ್ದೇವೆ, ಮೊದಲನೆಯದು ಸರ್ಕಾರಕ್ಕೆ ಆದಷ್ಟು ಹೆಚ್ಚು ಆದಾಯ ಬರಬೇಕು, ಎರಡನೆಯದು ಈ ಕಾಯಿದೆಯನ್ನು ಜಾರಿಯಲ್ಲಿ ತರುವಾಗ ಆದಷ್ಟು ಕಡಿಮೆ ತೊಂದರೆ ಜನರಿಗೆ ಆಗಬೇಕು. ಶ್ರೀಮಾನ್ ಸಿದ್ಧವೀರಪ್ಪನವರು ಮಾರಾಟ ಕರದ ಕಾಯಿದೆಯಲ್ಲಿ ಮತ್ತು ಅದಕ್ಕೆ ಸಂಬಂಧಪಟ್ಟ ನಿಯಮಾವಳಿಯಲ್ಲಿ ತಿದ್ದುಪಡಿ ಮಾಡಲಿಕ್ಕೆ ಒಂದು ಸಣ್ಣ ಕಮಿಟಿಯನ್ನು ಸರ್ಕಾರದವರು ನೇಮಕ ಮಾಡಿದರೆ ಒಳ್ಳೆಯದು ಎಂದು ಸೂಚನೆ ಮಾಡಿದರು. ರಾಜ್ಯದಲ್ಲಿ ಮಾರಾಟ ಕರದ ವಿಚಾರದಲ್ಲಿ ಒಂದು ಅಡ್ವೈಸರಿ ಕಮಿಟಿ ಇದೆ, ಅದರಲ್ಲಿ ಸಾರ್ವಜನಿಕ ಪ್ರತಿನಿಧಿಗಳು ಮತ್ತು ವ್ಯಾಪಾರ, ವಾಣಿಜ್ಯ ಕ್ಷೇತ್ರದಲ್ಲಿ ದುಡಿಯತಕ್ಕ ಸಂಸ್ಥೆಗಳ ಪ್ರತಿನಿಧಿಗಳು ಸದಸ್ಯರಾಗಿದ್ದಾರೆ. ಆ ಕಮಿಟಿಯಲ್ಲಿ ಮಾರಾಟ ಕರದ ಕಾಯಿದೆ ಮತ್ತು ಅದನ್ನು ಜಾರಿಯಲ್ಲಿ ತರತಕ್ಕಂಥ ಕೆಲಸದಲ್ಲಿ ಉಂಟಾಗುವ ತೊಂದರೆಗಳು ಇದರ ಬಗ್ಗೆ ಪುನಃ ಪುನಃ ಚರ್ಚೆ ನಡೆಸುತ್ತಾರೆ; ಮತ್ತು ಆ ಚರ್ಚೆಯಲ್ಲಿ ನಾವು ತೆಗೆದುಕೊಂಡಂಥ ನಿರ್ಣಯಗಳ ಮೇಲೆ ಸರ್ಕಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತದೆ; ಮತ್ತು ತಿದ್ದುಪಡಿ ಅವಶ್ಯಕ ಇದ್ದರೆ ಅದನ್ನೂ ತರುತ್ತೇವೆ. ಇಂದು ನಮ್ಮ ರಾಜ್ಯದಲ್ಲಿ ಹೊಸಹೊಸ ಕಾರ್ಖಾನೆಗಳು ಅನೇಕವು ಆಗಿವೆ. ಆಗುತ್ತಾ ಇವೆ. ಕೆಲವು ಕಾರ್ಖಾನೆಗಳಲ್ಲಿ ತಯಾರಾದಂತಹ ವಸ್ತುಗಳು ನಮ್ಮ ಮಾರಾಟ ಕರದ ಕಾಯಿದೆಯಲ್ಲಿರತಕ್ಕ ಪ್ರೊವಿಜನ್‌ಗಳಲ್ಲಿನ ಕಾರಣದಿಂದ ನಮ್ಮ ರಾಜ್ಯದಲ್ಲಿ ಮಾರಾಟ ಮಾಡಬಹುದಾದಂಥ ವಸ್ತುವಾದರೆ ನಮ್ಮಲ್ಲೇ ಮಾರಾಟವಾಗಬಹುದು, ಬೇರ ರಾಜ್ಯಗಳಿಗೂ ಹೋಗಿ ಮಾರಾಟವಾಗತಕ್ಕ ಪ್ರಸಂಗ ಕೂಡ ಬರುತ್ತದೆ. ಮತ್ತು ಬೇರೆ ರಾಜ್ಯಗಳಲ್ಲಿ ತಯಾರಾಗತಕ್ಕಂಥ ವಸ್ತುಗಳು ನಮ್ಮ ರಾಜ್ಯಕ್ಕೆ ಬರತಕ್ಕ ಪ್ರಸಂಗಗಳೂ ಕೂಡ ಬಂದಿವೆ. ಶ್ರೀಮಾನ್ ಕೊಠಾವಳೆ ಅವರು ಹೇಳಿದಂತೆ ಕೆಲವೊಂದು ವಸ್ತುಗಳ ಮೇಲೆ ಮಲ್ಟಿಪಾಯಿಂಟ್ ಕರವನ್ನು ಹಾಕಿದ್ದೇವೆ. ಈಗ ಕೆಲವು ಸದಸ್ಯರು ಮಲ್ಟಿ ಪಾಯಿಂಟ್ ತೆಗೆದು ಹಾಕಿ ಎಂದು ಸೂಚನೆ ಮಾಡಿದರು, ಮತ್ತೆ ಕೆಲವು ಸದಸ್ಯರು ಸಿಂಗಲ್ ಪಾಯಿಂಟ್ ಬೇಡ ಮಲ್ಟಿ ಪಾಯಿಂಟೇ ಎಲ್ಲಕ್ಕೂ ಇರಲಿ ಎಂದು ಸೂಚನೆ ಮಾಡಿದ್ದಾರೆ. ಈಗ ಒಂದು ವಿಚಾರವನ್ನು ಈ ವಿಷಯದಲ್ಲಿ ಮಾನ್ಯ ಸದಸ್ಯರು ಗಮನದಲ್ಲಿ ಇಡಬೇಕು ಎಂದು ನಾನು ಅವರಲ್ಲಿ ಬಿನ್ನೈಸಿಕೊಳ್ಳುತ್ತೇನೆ. ಈ ಕರ ಸಿಂಗಲ್ ಪಾಯಿಂಟ್ ಇರಬೇಕೇ ಅಥವಾ ಮಲ್ಟಿಪಾಯಿಂಟ್ ಇರಬೇಕೇ, ಈ ವಿಚಾರ ಮತ್ತು ಯಾವ ವಸ್ತುವಿನ ಮೇಲೆ ಎಷ್ಟು ಕರ ಹಾಕಬೇಕು ಈ ಎರಡನ್ನೂ ನಾವು ಆಯಾ ವಸ್ತು ಯಾವ ಪ್ರಮಾಣದಲ್ಲಿ ನಮ್ಮ ರಾಜ್ಯದಲ್ಲಿ ಉತ್ಪಾದನೆಯಾಗುತ್ತದೆ, ಆ ವಸ್ತುವನ್ನು ನಾವು ಹೆಚ್ಚು ಆಮದು ಮಾಡುತ್ತೇವೆಯೇ ಅಥವಾ ರಫ್ತು ಮಾಡುತ್ತೇವೆಯೇ, ಆ ವಸ್ತುಗಳು ನಮ್ಮಲ್ಲಿರತಕ್ಕ ಕೈಗಾರಿಕೆಗಳಿಗೆ ಬೇಕಾಗತಕ್ಕ ಕಾಂಪೊನೆಂಟ್ಸ್ ಈ ಎಲ್ಲಾ ವಿಚಾರಗಳನ್ನು ಪರಿಶೀಲನೆ ಮಾಡಿ ಈ ಕರದ ಮೊತ್ತ ಮತ್ತು ಎಷ್ಟು ಕಡೆ ಈ ಕರ ಹಾಕಬೇಕು, ಸಿಂಗಲ್ ಪಾಯಿಂಟೇ, ಮಲ್ಟಿಪಾಯಿಂಟೇ ಎಂದು ಹೇಳುವುದನ್ನು ನಿರ್ಧರ ಮಾಡಬೇಕು.

(ಶ್ರೀ ರಾಮಕೃಷ್ಣ ಹೆಗಡೆ)

6-30 P.M.

ಇಲ್ಲಿಯವರೆಗೂ ಮಾನ್ಯ ಸದಸ್ಯರು ಮಾಡಿರತಕ್ಕ ಎಲ್ಲಾ ಸೂಚನೆಗಳನ್ನೂ ನಾನು ಗಮನ ದಲ್ಲಿಟ್ಟುಕೊಂಡಿದ್ದೇನೆ. ಮತ್ತು ಮೈಸೂರು ರಾಜ್ಯದ ವಾಣಿಜ್ಯ ಸಂಸ್ಥೆಯು (ಮೈಸೂರು ಛೇಂಬರ್ ಆಫ್ ಕಾಮರ್ಸ್) ಮತ್ತು ಇದೇ ರೀತಿ ಇರತಕ್ಕ ಇನ್ನೂ ಕೆಲವು ವಾಣಿಜ್ಯ ಸಂಸ್ಥೆಗಳ ಸಲಹೆಗಳನ್ನು ತತ್ಸಬಂಧದಲ್ಲಿ ಕಳುಹಿಸಬೇಕೆಂಬುದಾಗಿ ಕೋರಲಾಗಿದೆ. ಅವುಗಳಿಂದ ಏನೇನು ಸಲಹೆಗಳು ಬರುತ್ತವೆಯೋ ಅದನ್ನು ನೋಡಿಕೊಂಡು ಅದರ ಜೊತೆಗೆ ಈಗಿರತಕ್ಕ ಕಾನೂನಿನಲ್ಲಿ ಏನೇನು ಲೋಪದೋಷಗಳಿವೆಯೋ ಅವುಗಳನ್ನೆಲ್ಲಾ ಸರಿಪಡಿಸಬೇಕೆಂಬುದು ನನ್ನ ಉದ್ದೇಶವಾಗಿದೆ ಅದನ್ನು ಶೀಘ್ರವಾಗಿ ಮಾಡುತ್ತೇನೆಂಬ ಭರವಸೆಯನ್ನು ನಾನೀಗ ತಮಗೆ ನೀಡಬಯಸುತ್ತೇನೆ.

ಇದಾದ ನಂತರ ಇನ್ನೂ ಕೆಲವು ವಿಚಾರದಲ್ಲಿ ಕೆಲವು ಟೀಕೆಗಳು ಬಂದಿವೆ. ಈ ಇಲಾಖೆಗಳಲ್ಲಿ ದುಡಿಯುತ್ತಿರುವ ನೌಕರರಲ್ಲಿ ಕೆಲಸಮಾಡುವುದಕ್ಕೆ ಅವರಿಗೆ ಸಮಾಧಾನವಿಲ್ಲ ಎಂದು ಕೆಲವು ಟೀಕೆಗಳೂ ಮತ್ತು ಅವರಲ್ಲಿ ಲಂಚಗೂಳಿತನ ಜಾಸ್ತಿಯಾಗುತ್ತಿದೆ ಎಂದು ಕೆಲವು ಟೀಕೆಗಳು ಬಂದಿವೆ. ಅವರು ಜನರೊಂದಿಗೆ ಸಹಕರಿಸದೆ ಅವರಿಗೆ ಬಹಳ ತೊಂದರೆಗಳಾಗತಕ್ಕ ರೀತಿಯಲ್ಲಿ ವರ್ತನೆ ಮಾಡುತ್ತಿದ್ದಾರೆಂದು ಕೆಲವರು ಹೇಳಿದ್ದಾರೆ.

Mr. SPEAKER.—Two hon'ble Members came and told me that too much clarification takes away the effect of the Debate. One or two clarifications here and there are all right, but clarifications for hours together are not good.

Sri M. S. KRISHNAN.—I have only one clarification to ask.

Mr. SPEAKER.—Let the reply be over and I will consider it.

ಶ್ರೀ ರಾಮಕೃಷ್ಣ ಹೆಗಡೆ.—ಈ ದಿವಸ ಅದು ಯಾವುದೇ ಒಂದು ಇಲಾಖೆಯಾಗಿರಲಿ ಅದರ ಕಾರ್ಯವನ್ನು ಯಶಸ್ವಿಯಾಗಿ ಜಾರಿಗೆ ತರತಕ್ಕ ವಿಚಾರ ಅಲ್ಲಿ ಕೆಲಸಮಾಡತಕ್ಕ ಜನರ ನಿಷ್ಠೆಯನ್ನು ಅವಲಂಬಿಸಿದೆ. ಒಂದು ಅಮಲನ್ನು ಜಾರಿಗೆತರಬೇಕೆಂದು ಉದ್ದೇಶಪಟ್ಟಾಗ ಅದು ತೆರಿಗೆ ವಸೂಲಿಯ ಕಾಯಿದೆಯಾಗಿರಲಿ ಅಥವಾ ಪ್ರೊಹಿಬಿಷನ್ನಿಗೆ ಸಂಬಂಧಪಟ್ಟ ಕಾಯಿದೇ ಆಗಿರಲಿ ಅವುಗಳನ್ನು ಜಾರಿಗೆ ತರತಕ್ಕ ನಮ್ಮ ಸಿಬ್ಬಂದಿವರ್ಗ ಏನಿದೆ ಅದರಲ್ಲಿ ಕೆಲಸಮಾಡತಕ್ಕವರೆಲ್ಲರೂ ಅತ್ಯಂತ ಪ್ರಾಮಾಣಿಕತೆಯಿಂದಲೂ ಮತ್ತು ಹೆಚ್ಚು ದಕ್ಷತೆಯಿಂದಲೂ ಕೂಡಿದವರಾಗಿದ್ದಾರೆಂದು ಸಾಧಿಸುವುದಕ್ಕೆ ನಾನು ಹೋಗುವುದಿಲ್ಲ. ಆದರೆ ನಾವು ಕಳೆದ ನಾಲ್ಕಾರು ವರ್ಷಗಳಲ್ಲಿ ಈ ಬಾಬಿನಲ್ಲಿ ಸಾಧಿಸಿರತಕ್ಕ ಪ್ರಗತಿಯನ್ನು ನೋಡಿದರೆ, ಆ ದೋಷ ಮಾನ್ಯ ಸದಸ್ಯರು ಹೇಳುತ್ತಿರುವಷ್ಟು ದೊಡ್ಡ ಪ್ರಮಾಣದಲ್ಲಿಲ್ಲ ಎಂದು ನಾನು ಅವರಿಗೆ ನಮ್ರವಾಗಿ ತಿಳಿಸಲಿಚ್ಛಿಸುತ್ತೇನೆ. ನಮ್ಮ ರಾಜ್ಯದ ಅಕ್ಕಪಕ್ಕದಲ್ಲಿರತಕ್ಕ ರಾಜ್ಯಗಳೆಂದರೆ—ಮದ್ರಾಸ್, ಮಹಾರಾಷ್ಟ್ರ, ಕೇರಳ ಮತ್ತು ಆಂಧ್ರ ಪ್ರದೇಶ. ಈ ಪೈಕಿ ಮಹಾರಾಷ್ಟ್ರ ಮತ್ತು ಮದ್ರಾಸ್ ಎರಡು ರಾಜ್ಯಗಳಲ್ಲೂ ನಡೆಯುತ್ತಿರುವ ವ್ಯಾಪಾರ ವಾಣಿಜ್ಯಗಳನ್ನು ಗಮನಕ್ಕೆ ತೆಗೆದುಕೊಂಡರೆ ಅವು ನಮ್ಮ ರಾಜ್ಯಕ್ಕಿಂತಲೂ ಬಹಳ ಮುಂದುವರಿದ ರಾಜ್ಯಗಳಾಗಿವೆ. ಹಾಗೆ ಆ ಮುಂದುವರಿದ ರಾಜ್ಯಗಳಲ್ಲಿ ಸೇಲ್ಸ್ ಟ್ಯಾಕ್ಸ್ ಬಾಬಿನಿಂದ ಆ ರಾಜ್ಯಗಳಿಗೆ ಬರತಕ್ಕ ವರಮಾನವೇನು ಮತ್ತು ನಮ್ಮ ರಾಜ್ಯದಲ್ಲಿ ಬರತಕ್ಕ ವರಮಾನವೇನು ಎಂಬುದನ್ನು ಹೋಲಿಸಿದಾಗ ಆ ರಾಜ್ಯಗಳ ವರಮಾನ ಎಷ್ಟೋ ಪಾಲು ಹೆಚ್ಚಾಗಿರಬೇಕಾಗಿತ್ತು. ಹಾಗಿಲ್ಲ ಈ ದಿವಸ ಈ ವರಮಾನ ಬಾಬಿನಿಂದ ಆ ರಾಜ್ಯಗಳಿಗೆ ಬರತಕ್ಕ ವರಮಾನವನ್ನು ನಮ್ಮ ರಾಜ್ಯದ ವರಮಾನಕ್ಕೆ ಹೋಲಿಸಿದರೆ ನಮ್ಮ ರಾಜ್ಯದ ವರಮಾನವೇ ಹೆಚ್ಚಾಗಿದೆ. ಇದನ್ನು ಅಲ್ಲಿಯ ಮಂತ್ರಿಗಳೂಕೂಡ ಒಪ್ಪಿದ್ದಾರೆ. ಮೈಸೂರು ರಾಜ್ಯದಲ್ಲಿ ಬರುತ್ತಿರುವ ಈ ವರಮಾನವನ್ನು ಇಲ್ಲಿನ ಜನ ಸಂಖ್ಯೆಯ ಪ್ರಮಾಣದ ಮೇಲಾಗಲೀ ಅಥವಾ ಔದ್ಯೋಗಿಕ ಪ್ರಮಾಣದ ಮೇಲಾಗಲೀ ಹೀಗೆ ಯಾವುದೇ ದೃಷ್ಟಿಯಿಂದ ನೋಡಿದರೂ, ನೀವು ಇಷ್ಟು ಹೆಚ್ಚಿನ ವರಮಾನವನ್ನು ಯಾವ ರೀತಿ ಸಾಧನೆ ಮಾಡಿ ಗಳಿಸುತ್ತಿದ್ದೀರಿ, ಆ ಮಾರ್ಗವನ್ನು ನಮಗೂ ಕೂಡ ನೀವು ತಿಳಿಸಬೇಕು, ಈ ಬಗ್ಗೆ ನಿಮ್ಮ ಸಲಹೆಯನ್ನು ಕೊಡಿ ಎಂಬುದಾಗಿ ಅವರು ಕೇಳುತ್ತಿದ್ದಾರೆ. ಆದರೆ ನಾನು ಹೀಗೆ ಹೇಳಿದ ಮೇಲೆ ನಮ್ಮಲ್ಲಿ ಇನ್ನು ಇದನ್ನು ಸುಧಾರಣೆಮಾಡತಕ್ಕ ಅಗತ್ಯವಿಲ್ಲ, ಅದಕ್ಕೆ ಅವಕಾಶವಿಲ್ಲ ಎಂಬುದು ನನ್ನ ವಾದವಲ್ಲ. ಈಗ್ಗೆ ಕೆಲವು ಕಾಲದ ಹಿಂದೆ ಈ ಲಂಚಗೂಳಿತನವನ್ನು ನಿಲ್ಲಿಸಲು ಸರ್ಕಾರದವರು ಒಂದು ಇಂಟೆಲಿಜೆನ್ಸ್ ವಿಜಿಲೆನ್ಸ್ ಸೆಲ್ ಎಂದು ಒಂದು ಸೆಲ್ಲನ್ನು ನಿರ್ಮಾಣ

ಮಾಡಿದ್ದೇವೆ. ಅದು ತಮಗೂ ಗೊತ್ತಿದೆ. ಅದಕ್ಕೆ ಯಾರು ಬೇಕಾದರೂ ಹೋಗಿ ಲಂಚಗುಳಿತನದ ದೂರುಗಳನ್ನಾಗಲಿ, ಅಥವಾ ಅಪಾದನೆಗಳನ್ನಾಗಲೀ ಕೊಡಬಹುದು. ಆದರೆ ಹಾಗೆ ಅಪಾದನೆಗಳನ್ನು ಮಾಡತಕ್ಕವರ ಹೆಸರು ವಿಳಾಸಗಳನ್ನು ಅವರೇನೂ ಕೊಡಬೇಕಾಗಿಲ್ಲ. ಇಂಥಾ ಮನುಷ್ಯ ಇಂಥಾ ಇರಾಖೆಯವರು ಲಂಚ ಕೇಳುತ್ತಿದ್ದಾರೆಂದು ಅವರಿಗೆ ತಿಳಿಸಿದರೆ ಸಾಕು. ಆ ಕೂಡಲೆ ಅಲ್ಲಿಗೆ ಹೋಗಿ ಅದನ್ನು ವಿಚಾರಣೆ ಮಾಡತಕ್ಕ ಅಧಿಕಾರವನ್ನು ನಾವು ಆ ಸೆಲ್ಲಿಗೆ ಕೊಟ್ಟಿದ್ದೇವೆ. ಆದರೆ ಈ ವಿಚಾರದಲ್ಲಿ ನಾನು ಇಲ್ಲಿರತಕ್ಕ ಎಲ್ಲಾ ಮಾನ್ಯ ಸದಸ್ಯರಲ್ಲೂ ಒಂದು ಮನವಿ ಮಾಡಿಕೊಳ್ಳುವುದೇನೆಂದರೆ—ಮಾರಾಟಗಾರರ ವಿಚಾರದಲ್ಲಿ ಅಥವಾ ಯಾರಾದರೊಬ್ಬ ವ್ಯಾಪಾರಿಯ ವಿಷಯದಲ್ಲಿ ಅವನು ಎಲ್ಲಿಯವನೇ ಆಗಿರಲಿ, ಉದ್ದೇಶಪಟ್ಟು ಸರ್ಕಾರಕ್ಕೆ ಮೋಸಮಾಡಬೇಕೆಂದು ಲೆಕ್ಕಗಳನ್ನು ಸುಳ್ಳುಸುಳ್ಳಾಗಿ ಬರೆದಿಟ್ಟಿದ್ದರೆ ಅಂಥಾ ಸುದ್ದಿಯನ್ನು ನನ್ನ ಗಮನಕ್ಕೆ ತಾವುಗಳು ದಯವಿಟ್ಟು ತಂದರೆ ನಮಗೆ ಬಹಳ ಉಪಕಾರವಾಗುತ್ತದೆ. ತಾವು ಇಷ್ಟು ಸಹಕರಿಸಿದರೆ ಇದರಿಂದ ನಾವು ಎರಡು ಕೆಲಸಗಳನ್ನು ಸಾಧಿಸಬಹುದು. ಒಂದು ಅಪ್ರಾಮಾಣಿಕರನ್ನು ಕೆಲಸದಿಂದ ತೆಗೆದು ಹಾಕುವುದು, ಇನ್ನೊಂದು ರಾಜ್ಯದ ಆದಾಯವನ್ನು ಹೆಚ್ಚು ಮಾಡಿಕೊಳ್ಳುವುದು ಹೀಗೆ ಎರಡು ಕೆಲಸಗಳನ್ನು ನಾವು ಸಾಧಿಸಬಹುದು.

ಇನ್ನು ವ್ಯವಸಾಯಗಾರರ ಮೇಲೆ ಹಾಕತಕ್ಕ ತೆರಿಗೆಯ ವಿಚಾರದಲ್ಲಿ ಬಹಳ ಚರ್ಚೆಯೇನೂ ಆಗಿಲ್ಲ. ಆದರೆ ನಾನು ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಪ್ರಸ್ತಾಪಿಸಲಿಕ್ಕೆ ಇಚ್ಛೆಪಡುತ್ತೇನೆ. ಈ ಬಾಬಿನಿಂದ ಸರ್ಕಾರಕ್ಕೆ ಬರತಕ್ಕ ವರಮಾನ ಸುಮಾರು ಒಂದೂವರೆ ಅಥವಾ ಒಂದೂ ಮುಕ್ಕಾಲು ಕೋಟಿ ರೂಪಾಯಿಗಳಾಗಬಹುದು. ಅಷ್ಟಾದರೆ ಹೆಚ್ಚಾಯಿತು. ಈ ತೆರಿಗೆಯೇ ವಿದ್ದರೂ ಕೆಲವು ಮನಿ ಕ್ರಾಪುಗಳಿಗೆ ಅಂದರೆ ಕ್ಯಾಷ್ ಕ್ರಾಪುಗಳಿಗೆ ಮಾತ್ರ ಅನ್ವಯಿಸತಕ್ಕದ್ದಾಗಿದೆ. ನಮ್ಮಲ್ಲಿ ಕ್ಯಾಷ್ ಕ್ರಾಪನ್ನು ಬೆಳೆಯತಕ್ಕ ಪ್ರದೇಶ ಬಹಳ ಕಡಮೆ. ನಾನಾಗಲೇ ನನ್ನ ಮುಂಗಡ ಪತ್ರದಲ್ಲಿ ಈ ಮಾನ್ಯ ಸಭೆಯ ಸದಸ್ಯರಿಗೆ ತಿಳಿಸಿರುವಂತೆ ವ್ಯವಸಾಯ ಕ್ಷೇತ್ರದಲ್ಲಿ ಬೆಳೆಯತಕ್ಕ ಎಲ್ಲಾ ಬೆಳೆಗಳಿಗೂ ಈ ಕರ ಅನ್ವಯಿಸುವಂತೆ ಒಂದು ಕಾನೂನನ್ನು ಮಾಡಬೇಕೆಂಬ ಅಭಿಲಾಷೆ ಸರ್ಕಾರಕ್ಕಿದೆ. ಇದರ ಬಗ್ಗೆ ನನ್ನ ಮನಸ್ಸಿನಲ್ಲಿ ಏನು ಇಟ್ಟುಕೊಂಡಿದ್ದೇನೆ ಎಂಬುದನ್ನು ತಮ್ಮ ಮುಂದೆ ತಿಳಿಸುತ್ತಿದ್ದೇನೆ. ಅದೇನೆಂದರೆ—ನಾಳೆ ನಾವು ವ್ಯವಸಾಯೋತ್ಪನ್ನಗಳ ಮೇಲೆ ಈ ಕರವನ್ನು ಹಾಕುವಾಗ ವ್ಯವಸಾಯವನ್ನು ಅವಲಂಬಿಸಿರತಕ್ಕ ಪ್ರತಿಯೊಂದು ಕುಟುಂಬಕ್ಕೂ ಯಾವ ತೊಂದರೆಯೂ ಆಗದಂತೆ ಒಂದು ಕಾನೂನನ್ನು ಮಾಡಬೇಕೆಂಬ ಉದ್ದೇಶ ನನಗಿದೆ. ನಮ್ಮಲ್ಲಿನ್ನೂ ನಿರಕ್ಷರತೆ ಜಾಸ್ತಿಯಾಗಿದೆ; ಮೇಲಾಗಿ ನಾವು ಇಲ್ಲಿಯವರೆಗೂ ಒಂದು ಒಳ್ಳೆಯ ಸಂಪ್ರದಾಯಕ್ಕೆ ಹೊಂದಿಕೊಂಡು ಬಂದವರಾಗಿದ್ದೇವೆ. ಆದುದರಿಂದ ಪ್ರತಿಯೊಂದು ಕುಟುಂಬಕ್ಕೂ ಸರಿಯಾಗಿ ಲೆಕ್ಕ ಪತ್ರಗಳನ್ನಿಡುವುದಕ್ಕೆ ಸಾಧ್ಯವಾಗುವುದಿಲ್ಲ. ಈ ವಿಚಾರಗಳನ್ನೆಲ್ಲಾ ಸರ್ಕಾರದವರು ಗಮನದಲ್ಲಿಟ್ಟುಕೊಂಡು ಸಣ್ಣಪುಟ್ಟ ಪ್ರಮಾಣದಲ್ಲಿ ವ್ಯವಸಾಯವನ್ನು ಅವಲಂಬಿಸಿರತಕ್ಕ ಜನರು ಎಷ್ಟಿದ್ದಾರೆಂಬುದನ್ನು ನೋಡಿಕೊಂಡು, ಯಾರಿಗೆ ಈ ಲೆಕ್ಕಪತ್ರಗಳನ್ನಿಡುವುದಕ್ಕೆ ಆಗುವುದಿಲ್ಲ ಎಂಬುದನ್ನು ಗಮನಕ್ಕೆ ತೆಗೆದುಕೊಂಡು ಇಂಥ ಜನರಾರಿಗೂ ತೊಂದರೆಯಾಗದ ರೀತಿಯಲ್ಲಿ ಒಂದು ಕಾನೂನನ್ನು ತಯಾರಿಸಬೇಕೆಂಬ ವಿಚಾರ ಈಗ ಸರ್ಕಾರದವರ ಪರಿಶೀಲನೆಯಲ್ಲಿದೆ.

ಇನ್ನು ಆಹಾರ ಪದಾರ್ಥಗಳ ಮೇಲೂ ಮತ್ತು ಗೊಬ್ಬರದ ಮೇಲೂ ಮಾರಾಟ ಕರವನ್ನು ಹಾಕುತ್ತಿರುವುದರಿಂದ ಬಡಬಗ್ಗರಿಗೆ ಬಹಳ ತೊಂದರೆಯಾಗುತ್ತಿದೆ ಎಂದು ಹೇಳಿದ್ದಾರೆ. ಇಲ್ಲಿಗೆ ನಾಲ್ಕಾರು ತಿಂಗಳ ಹಿಂದೆ ಮದ್ರಾಸಿನಲ್ಲಿ ಆಹಾರ ವಸ್ತುಗಳ ಮೇಲೆ ಹಾಕಲಾಗುತ್ತಿದ್ದ ಮಾರಾಟ ಕರವನ್ನು ತೆಗೆದು ಹಾಕಲಾಗಿದೆಯೆಂದು ಅಲ್ಲಿನ ಸರ್ಕಾರದವರು ಹೇಳಿದ್ದಾರೆ. ಆದರೆ ಅದನ್ನು ಅಲ್ಲಿ ಅವರು ಮಾಡಿರತಕ್ಕ ವಿಧಾನವೇ ಬೇರೆ. ಅದೇ ಕೇರಳ ರಾಜ್ಯದಲ್ಲಿ ಈ ದಿವಸ ಕಮ್ಯೂನಿಸ್ಟ್ ಸರ್ಕಾರ ಇದ್ದರೂ ಅಲ್ಲಿ ಕೂಡ ಈ ದಿವಸವೂ ಮಾರಾಟ ಕರ ಜಾರಿಯಲ್ಲಿದೆ. ಆದರೆ ಮದ್ರಾಸಿನವರು ಅಲ್ಲಿ ಒಂದು ಉಪಾಯವನ್ನು ಮಾಡಿದ್ದಾರೆ; ಈ ಮಾರಾಟ ಕರವನ್ನು ರದ್ದುಮಾಡುವುದರಲ್ಲಿ ಅವರು ಆಹಾರ ಧಾನ್ಯಗಳ ಮೇಲೆ ಈ ಕರವನ್ನು ತೆಗೆದುಕೊಳ್ಳುವುದಿಲ್ಲ ಎಂದು ಘೋಷಣೆ ಮಾಡಿದ ನಂತರ ಅದೇ ಸರ್ಕಾರ ಅಲ್ಲಿನ ಜನರಿಂದ ಧಾನ್ಯವನ್ನು ಲೆವಿ ರೂಪದಲ್ಲಿ ವಸೂಲ್ಮಾಡತಕ್ಕದ್ದರ ಮೇಲೆ ಒಂದು ಕ್ವಿಂಟಾಲಿಗೆ 2 ರೂಪಾಯಿಗಳನ್ನು ಸೇರಿಸಿ ಅದನ್ನು ಸರ್‌ಛಾರ್ಜ್ ಎಂದು ಹೇಳಿ, ಅವರೇನು ಅಲ್ಲಿಯ ಜನರಿಗೆ ಒಂದು ಕೈಲ ರಿಲೀಫ್ ಎಂದು ಹೇಳಿ ಕೊಟ್ಟರೋ ಅದನ್ನು ಇನ್ನೊಂದು ಕೈಲ ಸರ್‌ಛಾರ್ಜ್ ಎಂದು ಹೇಳಿ ಕಿತ್ತುಕೊಂಡಿದ್ದಾರೆ. ಈ ವಿಚಾರ ಬಹಳ ಜನರಿಗೆ ಗೊತ್ತಿಲ್ಲ.

ಈಗ ಅದೇ ರೀತಿ ನಾವು ಬೇಕಾದರೂ ಮಾಡಬಹುದು. ಇಂದು ಈ ಮಾರಾಟ ಕರ ಬಹಳ ಸ್ವಲ್ಪ. ಕೇವಲ ಇಷ್ಟು ಸ್ವಲ್ಪ ಕರದಿಂದ ಆಹಾರ ಪದಾರ್ಥದ ಬೆಲೆ ಹೆಚ್ಚಾಗಿದೆಯೆಂದು

(ಶ್ರೀ ರಾಮಕೃಷ್ಣ ಹಗಡೆ)

ಹೇಳುವುದಕ್ಕಾಗುವುದಿಲ್ಲ. ಅದಕ್ಕೆ ಬೇರೆ ಬೇರೆ ಕಾರಣಗಳಿವೆ. ಆದ್ದರಿಂದ ಗೊಬ್ಬರದ ವಿಚಾರದಲ್ಲಿ ನಾನು ಇಷ್ಟೇ ಹೇಳಬೇಕಾಗಿದೆ. ಗೊಬ್ಬರವನ್ನು ಸರ್ಕಾರ ಪೂರೈಕೆ ಮಾಡತಕ್ಕ ಜವಾಬ್ದಾರಿಯನ್ನು ತೆಗೆದುಕೊಂಡಿದೆ ಮತ್ತು ಅನೇಕ ರೀತಿಯ ಸಬ್ಸಿಡಿಯನ್ನೂ ಕೊಡುತ್ತಿದ್ದಾರೆ ; ಕೇಂದ್ರ ಸರ್ಕಾರದವರೂ ಕೊಡುತ್ತಿದ್ದಾರೆ, ನಾವೂ ಸ್ವಲ್ಪ ಕೊಡುತ್ತಿದ್ದೇವೆ. ಆದ್ದರಿಂದ ಮಾರಾಟ ಕರದಿಂದ ಆದಾಯ ಬಂದರೆ ಅದು ಅಷ್ಟೇನು ಹೆಚ್ಚಾಗಲಾರದು ಎಂದು ನನ್ನ ಅಭಿಪ್ರಾಯ.

ಎರಡನೆಯ ವಿಚಾರ ಬಹಳ ಚರ್ಚೆಗೆ ಒಳಪಟ್ಟ ವಿಚಾರ—ಪಾನನಿರೋಧ. ಇಂದು ಎಕ್ಸ್‌ಸೈಸ್ ಬೇಡಿಕೆ ವಿಚಾರ ಚರ್ಚೆ ನಡೆಯುತ್ತಿರುವುದರಿಂದ ಪಾನನಿರೋಧದಲ್ಲಿ ಪ್ರಸ್ತಾಪ ಬಂದಿರುವುದು ಸ್ವಾಭಾವಿಕ. ನಾಳೆ ಇದೇ ಸಭೆಯ ಮುಂದೆ ಈಗಿರತಕ್ಕಂತಹ ಪಾನನಿರೋಧ ಕಾಯಿದೆಯಲ್ಲಿ ಸ್ವಲ್ಪ ಬದಲಾವಣೆ ಮಾಡಬೇಕೆಂದು ಹೇಳಿ ಸರ್ಕಾರದವರು ನಿರ್ಧಾರ ಮಾಡಿ ಒಂದು ಮಸೂದೆಯನ್ನು ತರಲಿದ್ದಾರೆ. ಅದು ನಾಳೆ ಚರ್ಚೆಯಾಗಲಿದೆ. ಆದ್ದರಿಂದ ಅದನ್ನು ವಿಶೇಷವಾಗಿ ಪ್ರಸ್ತಾಪಮಾಡಲು ಬಯಸುವುದಿಲ್ಲ. ಅದರೂ ಒಂದೆರಡು ಮಾತುಗಳನ್ನು ಹೇಳದಿದ್ದರೆ ಬಹುಶಃ ಸದಸ್ಯರಿಗೆ ಸಮಾಧಾನವಾಗಲಿಕ್ಕಿಲ್ಲವೆಂದು ತಿಳಿಯುತ್ತೇನೆ. ಪಾನನಿರೋಧ ಇರತಕ್ಕದ್ದು ಬಹಳ ವಾದಗ್ರಸ್ತವಾದ ವಿಚಾರ. ಈ ಪಾನನಿರೋಧ ಬೇಕೇ, ಬೇಡವೇ ಎಂಬುದರಲ್ಲಿ ಯಾರದೂ ವಿರೋಧವಿರಲಿಕ್ಕಿಲ್ಲ. ಆದರೆ ಇವತ್ತಿನ ಪರಿಸ್ಥಿತಿಯಲ್ಲಿ ಇದು ಬಹಳ ಅಗತ್ಯವಾಗಿದೆ. ಈ ಕಡೆ ಕೂತ ಸದಸ್ಯರಲ್ಲೂ ಇದರ ಬಗ್ಗೆ ಒಮ್ಮತವಿಲ್ಲ, ಆ ಕಡೆ ಕೂತ ಸದಸ್ಯರಲ್ಲೂ ಕೂಡ ಇದರ ಬಗ್ಗೆ ಒಮ್ಮತವಿಲ್ಲ. ಪಾನನಿರೋಧವನ್ನು ನಾವು ನಮ್ಮ ದೇಶದ ಘಟನೆಯಲ್ಲಿ "ಡೈರೆಕ್ಟಿವ್ ಪ್ರಿನ್ಸ್‌ಪಲ್ಸ್" ನಲ್ಲಿ ಒಂದಾಗಿ ಮಾಡಿರತಕ್ಕದ್ದು ನಮಗೆಲ್ಲರಿಗೂ ಗೊತ್ತು. ಮಹಾತ್ಮಾ ಗಾಂಧಿಯವರು ಈ ಪಾನನಿರೋಧವನ್ನು ಕಡ್ಡಾಯವಾಗಿ ಜಾರಿಯಲ್ಲಿ ತರಬೇಕೆಂದು ಹೇಳಿದ್ದು ಗೊತ್ತು ಉಂಟು. ಆದರೆ ಒಬ್ಬೊಬ್ಬರು ಬಹಳ ಉಗ್ರವಾಗಿ ಹೇಳಿದ ಹಾಗೆ ಇದೆ. ಕಳೆದ 20-25 ವರ್ಷದ ಅವಧಿಯಲ್ಲಿ ಎಲ್ಲೆಲ್ಲಿ ಪಾನನಿರೋಧವನ್ನು ನಾವು ಜಾರಿಯಲ್ಲಿ ತಂದಿದ್ದೇವೋ, ಅಲ್ಲಿ ಎಷ್ಟುಮಟ್ಟಿಗೆ ಯಶಸ್ವಿಯಾಗಿದೆ ಎಂಬುದನ್ನು ಒಂದು ಸಲ ನಾವು ಆತ್ಮ ಪರೀಕ್ಷಣೆ ಮಾಡಿಕೊಳ್ಳುವುದು ಅಗತ್ಯವೆಂದು ಕಾಣುತ್ತದೆ. ಮಾನ್ಯ ಸದಸ್ಯರಾದ ಶ್ರೀ ರಂಗನಾಥರವರು, ಸರ್ಕಾರದವರ ಪಾನನಿರೋಧ ಕಾಯಿದೆ ವಿಫಲವಾಗಿದೆ, ಸರ್ಕಾರದವರು ಅದನ್ನು ಕಾರ್ಯಗತ ಮಾಡುವಲ್ಲಿ ವಿಫಲಗೊಂಡಿದ್ದರಿಂದ ಪಾನನಿರೋಧವನ್ನು ತೆಗೆದುಹಾಕುವಂತಹ ವಿಚಾರ ಮಾತನಾಡಿದ್ದಾರೆ ಎಂದು ಹೇಳಿದರು. ಆದರೆ ಈ ಪಾನನಿರೋಧ ಕಾಯಿದೆಯನ್ನು ಜಾರಿಯಲ್ಲಿ ತರುವವರು ಯಾರು ? ಬಹುಶಃ ಹಿಂದೆ ಒಂದು ಸಲ ನಾನು ಪ್ರಸ್ತಾಪಿಸಿದ್ದೆ. ಇವತ್ತು ಪಾನನಿರೋಧ ಕಾಯಿದೆ ಪಾಸ್ ಮಾಡಿದರೆ ಪಾನನಿರೋಧ ಬಂತು ಎಂತು ಹೇಳುವುದು ತಪ್ಪು. ಅದನ್ನು ಜಾರಿಯಲ್ಲಿ ತರುವಂತಹ ಜನರಿಗೆ, ಮತ್ತು ಅದರಲ್ಲಿ ಏನು ಅಪರಾಧವಾಗುತ್ತದೆ, ಆ ಅಪರಾಧವನ್ನು ಹುಡುಕತಕ್ಕ ಜನರಿಗೆ, ನ್ಯಾಯಾಲಯದಲ್ಲಿ ಅಪರಾಧಿಗಳನ್ನು ಯಾರು ವಿಚಾರ ಮಾಡುತ್ತಾರೆ, ಅಂಥ ಜನರಿಗೆ, ಯಾರು ಸಾಕ್ಷಿ ಹೇಳುತ್ತಾರೋ ಅಂಥ ಜನರಿಗೆ, ಮತ್ತು ವಾದ ಮಾಡತಕ್ಕ ವಕೀಲರಿಗೆ, ಪ್ರತಿಯೊಬ್ಬರಿಗೂ ಇದರಲ್ಲಿ ಅಚಲವಾದ ವಿಶ್ವಾಸವಿದ್ದರೆ ಮಾತ್ರ ಇದು ಯಶಸ್ವಿಯಾಗಲು ಸಾಧ್ಯ. ನಮ್ಮನೆ ಪೋಲೀಸರನ್ನು ಬಯ್ದರೆ ಏನು ಪ್ರಯೋಜನ ? ಅದು ಬಹಳ ಸ್ಪಷ್ಟವಾಗಿದೆ. ಈ ಪೋಲೀಸ್ ಇಲಾಖೆಯಲ್ಲಿ ನಮ್ಮ ಪಾನನಿರೋಧ ಕಾಯಿದೆ ಜಾರಿಯಲ್ಲಿ ಬಂದದ್ದರಿಂದ ದೇಶದಲ್ಲಿರುವ ಭ್ರಷ್ಟಾಚಾರಕ್ಕೆ ಮುಖ್ಯವಾದ ಕಾರಣವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಎಲ್ಲಕ್ಕಿಂತಲೂ ಹೆಚ್ಚಾಗಿ ಯಾವ ರೀತಿಯಲ್ಲಿ ಸಮಾಜ ಕಳ್ಳತನವನ್ನು ನೋಡುತ್ತಿದೆಯೋ, ಯಾವ ರೀತಿಯಲ್ಲಿ ಸಮಾಜ ಇಂದು ವ್ಯಭಿಚಾರವನ್ನು ನೋಡುತ್ತಿದೆಯೋ, ಯಾವ ರೀತಿ ಸಮಾಜ ಕೊಲೆಯನ್ನು ನೋಡುತ್ತಿದೆಯೋ, ಆ ರೀತಿಯಲ್ಲಿ ಈ ಮಧ್ಯ ಸೇವನೆಯನ್ನು ನೋಡುತ್ತಾ ಇಲ್ಲ. ನಮ್ಮ ಊರಿನಲ್ಲಿ ಒಂದು ಕಳ್ಳತನವಾದರೆ, ಊರಿನವರೆಲ್ಲಾ ಹುಡುಕಲಿಕ್ಕೆ ಹೋಗುತ್ತಾರೆ, ಮತ್ತು ಸಹಾಯ ಮಾಡುತ್ತಾರೆ. ಆದರೆ ಊರಿನಲ್ಲಿ ಭಟ್ಟಿಸರಾಯಿ ಇದ್ದರೆ ಊರಿನಲ್ಲಿರುವವರು ಯಾರೂ ಮುಖ ವೆತ್ತಿಯೂ ನೋಡುವುದಿಲ್ಲ. ಇಂಥ ಒಂದು ಪ್ರಸಂಗ ಇದ್ದಾಗ ಯಾವ ಸಿಬ್ಬಂದಿ ತಂದು ಜಾರಿಯಲ್ಲಿ ತರಬಹುದು ? ಆ ಸಿಬ್ಬಂದಿ ಏನಿದೆ, ಎಲ್ಲರೂ ಮನುಷ್ಯರೇ. ಹೀಗಿರುವಾಗ ನಾವು ಅತ್ಯಂತ ಕಟ್ಟುನಿಟ್ಟಾಗಿ ಗಾಂಧಿ ನೀತಿಯನ್ನು ಪಾಲನೆ ಮಾಡತಕ್ಕದ್ದು ಸಾಧ್ಯವೇ ಎಂದು ನಾನು ಕೇಳುತ್ತೇನೆ. ಇದು 1925ನೇ ಇಸವಿಯಲ್ಲಿ ಜಾರಿಯಲ್ಲಿ ಬಂದಿತ್ತು. ಇಂದು ಆ 30 ವರ್ಷಗಳ ಹಿಂದೆ ಇದ್ದಂತಹ ಪರಿಸ್ಥಿ ಇಲ್ಲ. ಯಾವ ಆರ್ಥಿಕ ಪರಿಸ್ಥಿತಿ ಇತ್ತೋ, ಯಾವ ಶೈಕ್ಷಣಿಕ ಪರಿಸ್ಥಿತಿ ಇತ್ತೋ, ಅಂಥ ಪರಿಸ್ಥಿತಿಗಳು ಇಂದು ಇಲ್ಲ. ಆ ಪರಿಸ್ಥಿತಿಯಲ್ಲಿರತಕ್ಕ ಅನೇಕ ಜನರಿಗೆ ಅನೇಕ ರೀತಿಯಲ್ಲಿ ಹೇಳತಕ್ಕ ಹಕ್ಕುಬಾಧ್ಯತೆಯೂ ಇರಲಿಲ್ಲ. ಆಗ ನಮ್ಮ ಮಕ್ಕಳಿಗೆ ಶಿಕ್ಷಣ ಕೊಡಬೇಕೆಂಬ ಅರಿವೂ ಇರಲಿಲ್ಲ.

ನಾಳೆ ನನ್ನ ಮಗ ಒಂದು ಜವಾಬ್ದಾರಿಯುತವಾದ ಸ್ಥಾನದಲ್ಲಿ ಕೂತುಕೊಳ್ಳುತ್ತಾನೆ ಎಂಬ ಆಶೆಯೂ ಇರಲಿಲ್ಲ. ಅಂಥ ಒಂದು ಪರಿಸ್ಥಿತಿಯಲ್ಲಿ ಪಾನನಿರೋಧ ಇದ್ದರೆ ಮಾತ್ರ ಯಾರೂ ಕುಡಿಯುವುದಿಲ್ಲ ಎಂದು ತಿಳಿದುಕೊಂಡರೆ ಅದು ಬಹಳ ತಪ್ಪು ಎಂದು ನಾನು ವಿನಯದಿಂದ ಹೇಳುತ್ತೇನೆ. ಅದ್ದರಿಂದ ನಾವು ಯೋಚನೆ ಮಾಡಬೇಕು. ಇದರಿಂದ ವರಮಾನ ಬರುತ್ತದೆ, ಅದರಿಂದಾಗಿ ನಾವು ತೆಗೆದುಹಾಕುವುದು ಎಂದು ಅಲ್ಲ. ಆರೀತಿ ಹೆಚ್ಚು ವರಮಾನ ಬಂದರೆ ಅದು ಸೆಕಂಡರಿ. ಇದರಿಂದ ಅನಾಹುತ ಏನಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಕರಪ್ಷನ್, ಆಮೇಲೆ ಇಲ್ಲಿಸಿಟ್ ಡಿಸ್ಟಿಲೇಷನ್ ಆಗುತ್ತದೆ. ಅದರಿಂದ ಸಮಾಜದಲ್ಲಿ ಕುಡಿಯತಕ್ಕವರಿಗೆ ಅವರ ಆರೋಗ್ಯ ವೇನಾಗುತ್ತದೆ ? ಅದೆಲ್ಲಕ್ಕೂ ಹೆಚ್ಚಾಗಿ "The respect for law and legal authority is completely going down. In democracy that is the most dangerous thing to happen. ಆದ್ದರಿಂದ ನಾವು ಸ್ವಲ್ಪ ಇದರ ಬಗ್ಗೆ ಯಾವುದೇ ಒಂದು ಪೂರ್ತಿ ದೂಷಿತ ಮನಸ್ಸಿನಿಂದ ನೋಡದೆ ವಾಸ್ತವಿಕ ದೃಷ್ಟಿಯಿಂದ ನೋಡಬೇಕು ಎಂದು ಅಭಿಪ್ರಾಯ. ನಾಳೆ ಈ ಕಾಯಿದೆ ಬರುತ್ತದೆ, ಅದರ ಬಗ್ಗೆ ಚರ್ಚೆ ಆದಾಗ ಹೆಚ್ಚು ವಿಚಾರ ಮಾಡಬಹುದು.

ಎಕ್ಸೈಸ್ ವಿಚಾರದಲ್ಲಿ ಮಾನ್ಯ ರಂಗನಾಥರವರು, ದೊಡ್ಡ ದೊಡ್ಡವರಿಗೆ ನೀವು ಸಹಾಯ ಮಾಡುತ್ತೀರಿ ಎಂದು ಹೇಳಿದರು. ಆ ರೀತಿ ಹೇಗೆ ಅಭಿಪ್ರಾಯ ಬಂತೋ ನನಗೆ ಗೊತ್ತಾಗಿಲ್ಲ. ಈ ಎಕ್ಸೈಜ್ ಸೇಲ್ಸ್ ಟ್ಯಾಕ್ಸ್ ರೂಲ್ಸನ್ನು ನಾವು ಗೆಜಿಟ್‌ನಲ್ಲಿ ಬಹಿರಂಗಪಡಿಸುತ್ತೇವೆ. ನಾವು ಹಿಂದೆ ಯಾವ ರೀತಿ ಮಾಡಿದ್ದೆವೋ, ಅದೇ ರೀತಿ ಮಾಡದೆ ಒಂದೊಂದು ವ್ಯತ್ಯಾಸ ಮಾಡಿದೆ. ಅದು ಏನೆಂದರೆ, ನಾವು ಯಾವಾಗಲೂ ಮಾಡುವಂತೆ auction *cum* tender ಪದ್ಧತಿಯನ್ನು ಕೈ ಬಿಟ್ಟಿಲ್ಲ. ಅದರಿಂದ ಸರ್ಕಾರಕ್ಕೆ ಹೆಚ್ಚು ಉತ್ಪತ್ತಿ ಬರುತ್ತದೆಯೆಂಬುದು ಮನವರಿಕೆಯಾಗಿದೆ. ಅಕ್ಷನ್ ಮಾಡುವಾಗ, ಟೆಂಡರ್ ಕರೆಯುವಾಗ ಬೇರೆ ಬೇರೆ ಗ್ರೂಪ್‌ಗಳಾಗಿ ಕರೆಯುವಂತೆ ಏರ್ಪಾಡು ಮಾಡಿದೆ. ಮೊದಲನೆಯದು ಷಾಪ್‌ಗಳನ್ನು ತಾಲ್ಲೂಕ್ ಲೆವಲ್ ಗ್ರೂಪ್ ಮಾಡುವಂತೆ ಡಿಸ್ಟ್ರಿಕ್ಟ್ ಲೆವಲ್ ಗ್ರೂಪ್ ಮಾಡುತ್ತೇವೆ. ಈ ಸಾರಿ ಮಾಡಿರುವುದು ಗುಲ್ಬರ್ಗ ಮತ್ತು ರಾಯಚೂರೂ ಸೇರಿ ಒಂದು ಗ್ರೂಪ್ ಮಾಡಿದ್ದೇವೆ. ಚಿಕ್ಕ ಚಿಕ್ಕ ಗ್ರೂಪ್ ಮಾಡಿದರೆ ಕೆಲವು ಷಾಪ್‌ಗಳಿಗೆ ಟೆಂಡರ್ ಬರುತ್ತವೆ. ಅಕ್ಷನ್ ನಿಂದ ಒಳ್ಳೆಯ ಹಣ ಬರುತ್ತದೆ. ಕೆಲವು ಕಡೆ ಬಿಡ್ಡರ್ಸ್ ಇರುವುದಿಲ್ಲ. ಹೋದ ವರ್ಷ ಈ ರೀತಿಯಾಯಿತು. ಈ ಸಾರಿ ಈ ಒಂದು ಕ್ರಮವನ್ನು ತೆಗೆದುಕೊಂಡಿದ್ದೇವೆ. ಈ ಕ್ರಮದಿಂದ ಸರ್ಕಾರಕ್ಕೆ ಹೆಚ್ಚು ಲಾಭವಾಗಿದೆಯೆಂದು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ. ಯಾವುದೇ ಪ್ರಭಾವಕ್ಕೆ ಒಳಗಾಗುವುದಾಗಲೀ, ಯಾರಿಗೇ ಅನುಕೂಲ ಮಾಡುವುದಾಗಲೀ ಇಲ್ಲ.

Sri H. SIDDAVEERAPPA.—Will the Minister be pleased to give us the figures of last year and this year ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಹೋದ ವರ್ಷ 1966-67ನೇ ಇಸವಿಯಲ್ಲಿ ರಾಯಚೂರು ಮತ್ತು ಗುಲ್ಬರ್ಗ ಜಿಲ್ಲೆಗಳಿಂದ 73,15,344 ರೂಪಾಯಿಗಳು ಬಂದಿದೆ. ಈ ಸಾಲಿನಲ್ಲಿ, 88,88,028 ರೂಪಾಯಿಗಳು ಬಂದಿದೆ. ಬೆಂಗಳೂರು ಡಿಸ್ಟ್ರಿಕ್ಟ್‌ನಲ್ಲಿ ಹೋದ ವರ್ಷ 1,23,00,290 ರೂಪಾಯಿಗಳು ಬಂದಿದೆ. ಈ ವರ್ಷ 1,46,00,484 ರೂಪಾಯಿಗಳು ಬಂದಿದೆ.

Sri M. S. KRISHNAN.—Can you tell us why the revenue from country liquor and shop rentals has reduced from Rs. 232 and odd lakhs to Rs. 127.53 lakhs ?

Sri RAMAKRISHNA HEGDE.—Those are estimates. ಮಾನ್ಯ ಸದಸ್ಯರಾದ ಬಂಗಾರಪ್ಪನವರು ಪ್ರಿವಿ ಪರ್ಸ್ ಬಗ್ಗೆ ಹೇಳಿದರು. ಇದು ನಮಗೆ ಸಂಬಂಧಪಟ್ಟ ವಿಷಯವಲ್ಲ. ಇದು ಕೇಂದ್ರ ಸರ್ಕಾರದ ನೀತಿ. ಕೇಂದ್ರ ಸರ್ಕಾರದವರು ಈ ಹಣವನ್ನು ಕೊಡುತ್ತಾರೆ. ಅವರು ಇರಬೇಕು ಎಂದರೆ ಇರುತ್ತದೆ, ಹೋಗಬೇಕು ಎಂದರೆ ಹೋಗುತ್ತದೆ. ಅದರ ಬಗ್ಗೆ ನಾನು ಪ್ರಸ್ತಾಪ ಮಾಡುವುದಿಲ್ಲ.

ಇನ್ನು ನಿವೃತ್ತಿ ವೇತನದ ಬಗ್ಗೆ ಹೇಳುತ್ತೇನೆ. ನೌಕರರು ನಿವೃತ್ತರಾಗುವ ಕಾಲಕ್ಕೆ ಸರಿಯಾಗಿ ಅವರ ನಿವೃತ್ತಿ ವೇತನ ಮಂಜೂರಾಗಿರುವುದಿಲ್ಲವೆಂದು ಕೆಲವು ಸದಸ್ಯರು ಟೀಕೆ ಮಾಡಿದರು. ನಿವೃತ್ತಿ ವೇತನ ಆದಷ್ಟು ಶೀಘ್ರವಾಗಿ ಸರ್ಕಾರಿ ನೌಕರರಿಗೆ ಸಿಗಬೇಕು. ಅದರಲ್ಲಿ ಅನಾವಶ್ಯಕವಾಗಿ ಏನಾದರು ತಡವಾದರೆ ಅದು ಪಾಪ ಎನ್ನತಕ್ಕ ಮನುಷ್ಯ ನಾನು. 500—600 ರೂಪಾಯಿಗಳ ಸಂಬಳ ತೆಗೆದುಕೊಳ್ಳುವವರು ನಿವೃತ್ತರಾದಾಗ ಒಮ್ಮೆಲೆ ಅವರಿಗೆ ನೂರು ಚಿಲ್ಲರೆ ವೃತ್ತಿ ವೇತನ ಸಿಗುತ್ತದೆ. ಈ ಹಣದಿಂದ ಜೀವನಕ್ಕೆ ತೊಂದರೆಯಾಗುತ್ತದೆ. ನೌಕರರ ನಿವೃತ್ತಿ ವೇತನವನ್ನು

(ಶ್ರೀ ರಾಮಕೃಷ್ಣ ಹೆಗಡೆ)

ನಿರ್ಧರಿಸುವಾಗ ಆಗುವ ವಿಳಂಬಕ್ಕೆ ಸರ್ಕಾರ ಕಾರಣವಲ್ಲ. ನಿವೃತ್ತರಾದವರು ಸರಿಯಾದ ಮಾಹಿತಿಯನ್ನು ಕೊಡದಿದ್ದರೆ, ಸರಿಯಾದ ಕಾಗದಪತ್ರಗಳನ್ನು ಕೊಡದಿದ್ದರೆ ವಿಳಂಬವಾಗುವುದು. ನಿವೃತ್ತಿವೇತನವನ್ನು ನಿಗದಿ ಮಾಡುವುದು ಸರ್ಕಾರದ ಕೈಯಲ್ಲಿ ಇಲ್ಲ. ಅಕೌಂಟೆಂಟ್ ಜನರಲ್ ಅವರು ಎಲ್ಲವನ್ನೂ ವಿಚಾರ ಮಾಡಿ, ಅವರಿಂದ ಕ್ಲಿಯರೆನ್ಸ್ ಸರ್ಟಿಫಿಕೇಟ್ ಸರ್ಕಾರಕ್ಕೆ ಬರಬೇಕು. ನಂತರ ಸರ್ಕಾರದವರು ಕೊನೆಯ ನಿರ್ಣಯವನ್ನು ಮಾಡಬೇಕು. ಮಾನ್ಯ ಸದಸ್ಯರ ಅವಗಾಹನೆಗೆ 1956ರಿಂದ 1966ರವರೆಗೆ ಪ್ರತಿವರ್ಷ ಪೆನ್‌ಷನ್ ಕ್ಲೈಮ್ಸ್ ಫೈನಲೈಜ್ ಆದವು ಎಷ್ಟು ಎಂಬುದನ್ನು ಹೇಳುತ್ತೇನೆ.

1956	...	...	317
1957	...	...	1845
1958	...	...	2736
1959	...	...	3050
1960	...	...	2746
1961	...	...	2744
1962	...	...	5914
1963	...	...	6790
1964	...	...	6664
1965	...	...	6134
1966	...	...	6489

1961ರ ಆಗಸ್ಟ್ ತಿಂಗಳಲ್ಲಿ 1186 ಕೇಸ್‌ಗಳು ಅಕೌಂಟೆಂಟ್ ಜನರಲ್ ಅವರ ಕಚೇರಿಯಲ್ಲಿ ಪೆಂಡಿಂಗ್ ಇದ್ದರೆ ಲೇಟೆಸ್ಟ್ ಇರುವ ಸಂಖ್ಯೆ ಕೇವಲ 34. ಅದರಂತೆ 1963ರ ಮಾರ್ಚಿ ತಿಂಗಳ ಕೊನೆಗೆ ನಮ್ಮ ಇಲಾಖೆಯಿಂದ ಅಕೌಂಟೆಂಟ್ ಜನರಲ್ ಕಚೇರಿಗೆ ಹೋಗಬೇಕಾದವು 2016 ಇದ್ದರೆ, ಈಗ ಅದು 376ಕ್ಕೆ ಇಳಿದಿದೆ. ಇದರಿಂದ ನಮ್ಮ ಇಲಾಖೆಯಲ್ಲಿ ಜಡತ್ವವಿಲ್ಲವೆಂದು, ಚುರುಕಾಗಿ ಕೆಲಸ ಮಾಡುತ್ತಿದ್ದಾರೆಂದು ತಿಳಿದುಕೊಳ್ಳಬಹುದು. ವಿಳಂಬವಾದರೆ ಅದಕ್ಕೆ ಕಾರಣ ಸಂಬಂಧಪಟ್ಟವರಿಂದ ಕಾಗದಪತ್ರಗಳು ಬಂದಿಲ್ಲದಿರುವುದು, ಅವರಿಂದ ಜಾಗ್ರತೆ ಬಂದರೆ, ಕೂಡಲೆ ತೀರ್ಮಾನವಾಗುತ್ತದೆ.

ಸಾಮಾನ್ಯವಾಗಿ ಮಾನ್ಯ ಸದಸ್ಯರು ಹೇಳಿದಂಥ ಮುಖ್ಯ ವಿಚಾರಗಳ ಬಗ್ಗೆ ನಾನು ಹೇಳಿದ್ದೇನೆ. ನಾನು ಮೊದಲೇ ಹೇಳಿದಂತೆ, ಇವತ್ತು ಮಾನ್ಯ ಸದಸ್ಯರು ಮಾಡಿದ ಭಾಷಣದ ಧಾಟಿ,ಅದರಲ್ಲಿರ ತಕ್ಕಂಥ ವಿಷಯ ಮತ್ತು ಅವರ ಅಪ್ರೋಚ್ ಏನಿತ್ತು, ಅವುಗಳು ಸಂತೋಷದಾಯಕವಾಗಿತ್ತು. ಮಾನ್ಯ ಸದಸ್ಯರು ಮಾಡಿರುವ ಸೂಚನೆಗಳಿಗೆ ಗಮನವಿಟ್ಟಿರುತ್ತೇನೆ. ಎಲ್ಲಾ ಇಲಾಖೆಗಳು ಇನ್ನೂ ಚುರುಕಾಗಿ, ಇನ್ನೂ ಶೀಘ್ರ ರೀತಿಯಿಂದ ನಡೆಯುವಂತೆ, ಮತ್ತು ಸರ್ಕಾರಕ್ಕೆ ಇನ್ನೂ ಹೆಚ್ಚು ವರಮಾನ ಬರುವಂತೆ ಕೆಲಸ ಮಾಡುತ್ತೇವೆಂದು ಅರಿಕೆ ಮಾಡಿಕೊಂಡು, ಈ ಬೇಡಿಕೆಯನ್ನು ಪಾಸ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

Sri B. P. GANGADHAR (Tumkur).—Taking into consideration the prevailing standards, these unfortunate men, who have served our country for such a long time, the retired officials, is it not desirable that some more Dearness allowance be added to what they have been getting now ?

Sri RAMAKRISHNA HEGDE.—Sir, I am sorry, I missed that point. Some Hon'ble member had suggested that the Government should give some increase in the Dearness Allowance in respect of pensioners also

The Hon'ble members might recall that a few years ago Government has given such a relief however small it was. Now, there has been a very pressing demand from the Association of Pensioners that the Government should revise further the Dearness Allowance scale. This matter is now referred to the Pay Commission, and I do not want to say anything at this stage.

ಶ್ರೀ ಎಲ್. ಶ್ರೀಕಂಠಯ್ಯ.—ಸ್ವಾಮಿ, ಈಗ ಹೇಳಿದಿರಿ, ಎಲ್ಲ ಬೆಳೆಗಳಿಗೂ ಕೃಷಿ ಉತ್ಪನ್ನ ತೆರಿಗೆ ಹಾಕುತ್ತೇವೆಂದು. ಭತ್ತ, ರಾಗಿ, ಜೋಳ ಮುಂತಾದವನ್ನು 10 ಎಕರೆಯೊಳಗೆ ಬೆಳೆಯುವವರಿಂದ ಕೃಷಿ ಉತ್ಪನ್ನ ತೆರಿಗೆಯನ್ನು ವಸೂಲು ಮಾಡದೆ ಅದಕ್ಕಿಂತ ಹೆಚ್ಚು ಜಮೀನು ಇರುವ ಶ್ರೀಮಂತರಿಂದ ತೆರಿಗೆ ವಸೂಲು ಮಾಡುವುದು ಒಳ್ಳೆಯದೆಂದು ತಮ್ಮ ಗಮನಕ್ಕೆ ಬಂದಿದೆಯೆ?

7.00 P. M.

ಶ್ರೀ ರಾಮಕೃಷ್ಣ ಹೆಗಡೆ.—ಉದಾಹರಣೆಗೆ ಹೈಬ್ರಿಡ್ ಜೋಳ, ಹೈಬ್ರಿಡ್ ಮೇಜ್—ಇಂಥವುಗಳನ್ನು ವರ್ಷಕ್ಕೆ ಎರಡು ಮೂರು ಪೀಕ್ಸನ್ನು ತೆಗೆದುಕೊಳ್ಳುತ್ತಾರೆ. ಒಂದು ಎಕರೆಗೆ ಎರಡು ಸಾವಿರ, ಮೂರು ಸಾವಿರ ರೂಪಾಯಿಗಳ ಬೆಲೆಯನ್ನು ತೆಗೆದುಕೊಳ್ಳುತ್ತಾರೆ. ಅಂತಹವರಿಗೆ ಇದು ಲಾಗು ಆಗುವುದಿಲ್ಲ. ಇದನ್ನು ಸರಿಯಾಗಿ ಇನ್‌ಕಂ ಮೇಲೆ ಲೆಕ್ಕಹಾಕುತ್ತಾ ಹೋದರೆ ದೊಡ್ಡವರು ಹೆಚ್ಚು ಕೊಡಬೇಕಾಗುತ್ತದೆ, ಸಣ್ಣವರು ಕಮ್ಮಿ ಕೊಡಬೇಕಾಗುತ್ತದೆ. ಅದರಿಂದಾಗಿ ಎಲ್ಲಾ ಬೆಳೆಗಳನ್ನು ಇದರೊಳಗೇ ತರಬೇಕೆಂದು ಯೋಚನೆಮಾಡಿದ್ದೇವೆ.

Sri M. S. KRISHNAN.—Is it not more justifiable to remove this sales tax on foodgrains and add it on to agricultural income tax?

Sri RAMAKRISHNA HEGDE.—These are entirely two different things. I am not perepared to lose which I may not gain from the other sector.

Mr. SPEAKER.— The question is :

> "That the respective sums not exceeding the amounts mentioned in the Demands Nos. 1, 3, 5, 34, 35, 36, 40, 41, 52 and 54 be granted to Government to defray the charges which will come in course of payment during the financial year for the period ending 31st day of March 1967."

The motion was adopted.

As directed by the Speaker, the Demands for Grants adopted by the House, are reproduced below:—

DEMAND NO. 1—TAXES ON INCOME OTHER THAN CORPORATION TAX

4. Taxes on Income other than Corporation Tax.

> "That a sum not exceeding Rs. 6,58,000 be granted to the Government to defray the charges which will come in course of payment during the financial year for the period ending 31st day of March 1968, in respect of 'Taxes on Income other than Corporation Tax'."

(MR. SPEAKER)

DEMAND NO. 3.—STATE EXCISE.

10. State Exceis Duties.

"That a sum not exceeding Rs. 26,92,000 be granted to the Government to defray the charges which will come in course of payment during the financial year for the period ending 31st day of March 1968, in respect of 'State Excise Duties'."

DEMAND NO. 5—SALES-TAX—ADMINISTRATION.

12. Sales-tax.

"That a sum not exceeding Rs. 63,18,000 be grated to the Government to defray the charges which will come in course of payment during the financial year for the period ending 31st day of March 1968, in respect of 'Sales tax'."

DEMAND NO. 34.—PENSIONS AND OTHER RETIREMENT BENEFITS

65. Pensions and other Retirement Benefits.

"That a sum not exceeding Rs. 3,16,37,000 be granted to the Government to defray the charges which will come in course of payment during the financial year for the period ending 31st day of March 1968, in respect of 'Pensions and other Retirement Benefits'."

DEMAND NO. 35—TERRITORIAL AND POLITICAL PENSIONS.

66. Territorial and Political Pensions.

"That a sum not exceeding Rs. 1,50,000 be granted to the Government to defray the charges which will come in course of payment during the financial year for the period ending 31st day of March 1968, in respect of 'Territorial and Political Pensions'."

DEMAND NO. 36.—PRIVY PURSES AND ALLOWANCES.

67. Privy Purses and Allowances of Indian Rulers.

"That a sum not exceeding Rs. 33,000 be granted to the Government to defray the charges which will come in course of payment during the financial year for the period ending 31st day of March 1968, in respect of Privy Purses and Allowances of Indian Rulers'."

DEMAND NO. 40.—COMMUTATION OF PENSIONS.

72. Commutation of Pensions.

" That a sum not exceeding Rs. 25,55,000 be granted to the Government to defray the charges which will come in course of payment during the financial year for the period ending 31st day of March 1968, in respect of 'Commutation of Pensions'."

DEMAND NO. 41.—MISCELLANEOUS COMPENSATIONS AND ASSIGNMENTS.

76. Other Miscellaneous Compensations and Assignments

"That a sum not exceeding Rs. 1,31,72,000 be granted to the Government to defray the charges which will come in course of payment during the financial year for the period ending 31st day of March 1968, in respect of 'Other Miscellaneous Compensations and Assignments'."

DEMAND NO. 52.—COMMUTED VALUE OF PENSIONS.

120. Payments of Commuted of Value Pensions.

" That a sum not exceeding Rs. 24,47,000 be granted to the Government to defray the charges which will come in course of payment during the financial year for the period ending 31st day of March 1968, in respect of Payments of Commuted Value of Pensions'."

DEMAND NO. 54.—ADVANCES AND LOANS.

Q. Loans and Advances by State Union Territory Governnents.

" That a sum not exceeding Rs. 18,92,35,000 be granted to the Government to defray the charges which will come in course of payment during the financial year for the period ending 31st day of March 1968, in respect of 'Loans and Advances by State/Union Territory Governments'."

The House adjourned at Five Minutes past Seven of the Clock to meet again at One of the Clock on Tuesday, 11th July 1967.

WD 9006—GPB—500—6.9-67